# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ಮುಂದುವರಿದ ಪಠ್ಯ
## ADVANCED TEXT

ತರಗತಿ

VIII

ಭಾಗ 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - VIII (Advanced Text) - Part 2

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
# KANNADA - VIII AT - PART 2

**Advisor**

| | |
|---|---|
| Shivashankara P. | Asst. Professor, GPM College, Manjeshwar |

**Chairman**

| | |
|---|---|
| Rama Bhat C.H. | Rtd. HOD, Government College, Kasaragod |

**Experts**

| | |
|---|---|
| Dr. Shrikrishna Bhat | Rtd. Professor, Government College, Kasaragod |
| Dr. Radhakrishna N. Bellur | Professor, Government College, Kasaragod |

**Participants**

| | |
|---|---|
| Sri. Radhakrishna M | Rtd. Headmaster,Govt.HSS Pandi |
| Smt.Pushpalatha P | Rtd.HSST, BEMHSS Kasaragod |
| Smt.Sharmila A | HSST Jr.Kannada, Govt.HSS Mangalpady |
| Smt. Soumya R | HSST Jr.Kannada, Govt.HSS Bandadka |
| Dr. Subhash Pattaje | HSST Jr.Kannada, SSHSS Sheni |
| Smt. Dayavathi Saliyan | HST Kannada, GHS Moodambail |
| Smt.Mallika G | HST Kannada, GHS Udyawar |
| Smt. Sumithra K | HST Kannada, Govt, HSS Paivalike Nagar |

**Artists**

| | |
|---|---|
| Sri. Prakash P. | Specialist Drawing Teacher, BRC Manjeshwar |
| Sri. Madhusudhanan K V | Drawing Teacher, CKNS GHSS Pilicode |
| Sri. Satheesh | Specialist Drawing Teacher, BRC Kumbala |

**Academic Co-ordinator**
**Dr. Sahaya Dhas D.**
Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| | | | |
|---|---|---|---|
| **ಘಟಕ 4 : ಪ್ರಗತಿ ಪಥ** | | | **7 - 25** |
| ● | ಹಳ್ಳಿ ಮುಳುಗೋಗ್ತದೆ | ಸಣ್ಣಕತೆ | ನಿರಂಜನ |
| ● | ಕಟ್ಟುವೆವು ನಾವು | ಕವನ | ಎಂ. ಗೋಪಾಲಕೃಷ್ಣ ಅಡಿಗ |
| ● | ಬಸರೂರು ಪಂಚಾಯತಿಕೆ | ಕತೆ | ದಿ. ಬೇಕಲ ರಾಮನಾಯಕ |
| **ಘಟಕ 5 : ಕಲೆ - ಸಂಸ್ಕೃತಿ** | | | **26 - 56** |
| ● | ಚೆನ್ನೆಮಣೆಯ ಹಿಂದಿನ ವಿಧಿ! | ನಾಟಕ | ಅಮೃತ ಸೋಮೇಶ್ವರ |
| ● | ಬೇಹಾಗ ತರಿಸಿಕೊಂಡಪೆನ್... | ಕಾವ್ಯ | ರಾಘವಾಂಕ |
| ● | ಯಕ್ಷಗಾನ | ಲೇಖನ | ವಿ.ಜಿ. ನಾಯಕ |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಸೆಕ್ಷನ್‌ನ “ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ” ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 4. ಪ್ರಗತಿ ಪಥ





ಭಾರತವು ಹಳ್ಳಿಗಳ ದೇಶವಾಗಿದೆ. ಅಂತೆಯೇ ಹಳ್ಳಿಗಳು ಕಾಡಿನೊಂದಿಗೆ ಯಾವತ್ತೂ ಅವಿನಾಭಾವ ಸಂಬಂಧವನ್ನು ಹೊಂದಿದೆ. ಕಾಡಿನಿಂದ ನಾಡಿಗೆ ನಾಡಿನಿಂದ ನಗರದ ಕಡೆಗೆ ನಮ್ಮ ಜೀವನ ಪಥ ಸಾಗಿದಾಗ ಹಲವು ರೀತಿಯ ಬದಲಾವಣೆಗಳು ಆದುದನ್ನು ನಾವು ಗಮನಿಸಬಹುದು. ಹಿಂದೆ ಕೃಷಿ, ನೇಯ್ಗೆ, ಕುಂಬಾರಿಕೆಯೇ ಮೊದಲಾದ ವೃತ್ತಿ ಆಧಾರಿತ ಗ್ರಾಮೀಣ ಬದುಕು ಸುಸ್ಥಿರವಾಗಿತ್ತು. ಪರಿಸರಕ್ಕೆ ಪೂರಕವಾದ ಚಟುವಟಿಕೆಗಳು, ಸಾಂಘಿಕ ಜೀವನ ಕ್ರಮ ಬದುಕಿನ ಅವಿಭಾಜ್ಯ ಅಂಗಗಳಾಗಿದ್ದವು. ಮುಂದೆ ಆಯಾ ಕ್ಷೇತ್ರದಲ್ಲಿ ಹಲವಾರು ಮಹನೀಯರ ಕೊಡುಗೆಗಳೊಂದಿಗೆ, ವೈಜ್ಞಾನಿಕ ತಿಳುವಳಿಕೆಗಳೊಂದಿಗೆ ಅಭಿವೃದ್ಧಿ ಉಂಟಾಯಿತು. ವಿದ್ಯಾವಂತರಾದ ಗ್ರಾಮೀಣ ಜನರ ಉದ್ಯೋಗಾಭಿಲಾಷೆ, ಸೌಲಭ್ಯಾಕಾಂಕ್ಷೆ, ಸೌಕರ್ಯಾಕಾಂಕ್ಷೆ ಅವರನ್ನು ನಗರಗಳ ಕಡೆಗೆ ಮುಖ ಮಾಡುವಂತೆ ಮಾಡಿತು. ಇದರಿಂದ ಒಟ್ಟು ಜನಜೀವನವು ಪ್ರಗತಿಪಥದತ್ತ ಸಾಗಿತು.

ಕನ್ನಡ ನಾಡಿನ ಪ್ರಮುಖ ನವ್ಯ ಕವಿಗಳಲ್ಲಿ ಒಬ್ಬರೆನಿಸಿದ ಎಂ.ಗೋಪಾಲಕೃಷ್ಣ ಅಡಿಗರ 'ಕಟ್ಟುವೆವು ನಾವು' ಎಂಬ ಕವನದಲ್ಲಿ ಹೊಸ ನಾಡನ್ನು ಕಟ್ಟುವ ತುಡಿತವಿದೆ. ಇದು ಯುವಜನರಿಗೆ ವೀಳೆಯವನ್ನು ಕೊಟ್ಟು ಹೊಸ ನಾಡನ್ನು ಕಟ್ಟಲು ಕರೆ ಕೊಡುತ್ತದೆ. ಹಳ್ಳಿಗಳನ್ನು ಅಭಿವೃದ್ಧಿಪಡಿಸಲು ಅನೇಕ ಮಂದಿ ಮಹನೀಯರು ಶ್ರಮಿಸಿದ್ದಾರೆ. ದಿ. ಬೇಕಲ ರಾಮ ನಾಯಕರ 'ಬಸರೂರು ಪಂಚಾಯತಿಕೆ' ಎಂಬ ಐತಿಹ್ಯ ಕಥೆಯು ಇದಕ್ಕೆ ಸಾಕ್ಷಿಯಾಗಿದೆ. ಹಿಂದಿನ ಕಾಲದ ಗ್ರಾಮೀಣ ಬದುಕು ಸುಸ್ಥಿರವಾಗಿತ್ತು. ಅಗತ್ಯಗಳಿಗನುಸಾರವಾಗಿ ಗ್ರಾಮೀಣ ಅಭಿವೃದ್ಧಿಯಾಗುವಾಗ ಹಳೆ ತಲೆಮಾರಿನವರಿಗೆ ಅದು ಫಕ್ಕನೆ ಸ್ವೀಕಾರ್ಯವಾಗುವುದಿಲ್ಲ. ಆದರೂ ಅನಿವಾರ್ಯತೆಗೆ ಕಟ್ಟು ಬಿದ್ದು ಹೊಸ ಜೀವನಕ್ರಮಕ್ಕೆ ಹೊಂದಿಕೊಳ್ಳುತ್ತಾರೆ ಎಂಬ ವಿಚಾರ 'ಹಳ್ಳಿ ಮುಳುಗೋಗ್ತದೆ' ಎಂಬ ಕತೆಯಲ್ಲಿ ನಿರೂಪಿಸಲ್ಪಟ್ಟಿದೆ. 'ತೊರೆಗೆ ಮಣಿದರೆ ಗೇಣು ಬದುಕುವುದು' ಎಂಬಂತೆ ನಗರೀಕರಣಗೊಳ್ಳುವಾಗ ಎಲ್ಲರೂ ಅದಕ್ಕನುಗುಣವಾಗಿ ಬದುಕಬೇಕಾಗುತ್ತದೆ ನಷ್ಟ ಕಷ್ಟಗಳನ್ನೂ ಸಹಿಸಿಕೊಳ್ಳಬೇಕಾಗುತ್ತದೆ ಎಂಬುದನ್ನು ಈ ಕತೆ ತಿಳಿಸಿಕೊಡುತ್ತದೆ.

ಒಟ್ಟಿನಲ್ಲಿ, ದೇಶದ ಅಭಿವೃದ್ಧಿಯಲ್ಲಿ ಹೊಸನಾಡನ್ನು ಕಟ್ಟುವ ಅಗತ್ಯ, ಹಳ್ಳಿಗಳ ಏಳಿಗೆಗಾಗಿ ಶ್ರಮಿಸಿದ ಮಹನೀಯರು ಮತ್ತು ಪ್ರಕೃತಿ ನಾಶವು ಸಕಲ ಜೀವಿಗಳಿಗೂ ಹಾನಿಕರವೆಂಬ ಅರಿವನ್ನು ಮೂಡಿಸುವ ಪಾಠಗಳು 'ಪ್ರಗತಿ ಪಥ' ಎಂಬ ಘಟಕದಲ್ಲಿವೆ.

# ಜೆಮ್ ಷೆಡ್‌ಜಿ 'ಟಾಟಾ'

ಭಾರತದಲ್ಲಿ ಕೈಗಾರಿಕೆಗಳು ಪ್ರಾರಂಭವಾದ ನಂತರ ಕೋಟಿಗಟ್ಟಲೆ ಜನರು ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಇದಕ್ಕೆ ನಾಂದಿ ಹಾಡಿದ ವ್ಯಕ್ತಿ ಜೆಮ್ ಷೆಡ್ ಜಿ ಟಾಟಾ. ಇವರು ಭಾರತದಲ್ಲಿ ಹತ್ತಿ ಗಿರಣಿ, ಉಕ್ಕಿನ ಕಾರ್ಖಾನೆ, ತಾಜ್ ಹೋಟೆಲ್, ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ವಿದ್ಯುತ್ ಉತ್ಪಾದನೆ ಮುಂತಾದ ಹಲವು ಕೈಗಾರಿಕೆಗಳನ್ನು ಸ್ಥಾಪಿಸಿ ಭಾರತದ ಇತರ ಉದ್ಯಮಿಗಳಿಗೆ ಮಾದರಿಯಾದರು. ಟಾಟಾ ಸಂಸ್ಥೆ ನೂರಾರು ಉದ್ಯಮಗಳನ್ನು ನಡೆಸುತ್ತ ದೇಶ ಸೇವೆ ಮಾಡುತ್ತಿದೆ. ಇದರಿಂದ ಲಕ್ಷಾಂತರ ಜನರಿಗೆ ಉದ್ಯೋಗ ದೊರೆತಿದೆ. ಭಾರತವು ಕೈಗಾರಿಕೆಗಳಲ್ಲಿ ಅಭಿವೃದ್ಧಿ ಹೊಂದಲು ಜೆಮ್ ಷೆಡ್ ಜಿ ಟಾಟಾ ಮೂಲ ಕಾರಣರಾಗಿದ್ದಾರೆ.

- ಮೇಲಿನ ಗದ್ಯಭಾಗವನ್ನು ಓದಿ ನಿಮ್ಮ ಅನಿಸಿಕೆಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ಹಳ್ಳಿ ಮುಳುಗೋಗ್ತದೆ

**- ನಿರಂಜನ**

ಶುಭ ಮುಹೂರ್ತ ಸನ್ನಿಹಿತವಾಗಿತ್ತು.

ಅಡ್ಡಪಂಚೆಯ ಮೇಲೆ ರೇಶಿಮೆಯ ಅಂಗಿತೊಟ್ಟು ರಾಮ ಗುಡಿಸಲಿನಿಂದ ಹೊರಬಂದ. ಮದುವೆಗೆಂದು ಹಿಂದೆ ಹೊಲಿಸಿದ್ದ ಆ ಅಂಗಿ ಬೆಳೆದ ಮೈಮಾಂಸಖಂಡಗಳಿಗೆ ಹೊದಿಕೆಯಾಗಿ ಈಗ ಬಿರಿಯುತ್ತಿತ್ತು. ತುಂಬು ಮುಖಕ್ಕೆ ಶೋಭೆಯಾಗಿತ್ತು ಕುಡಿಮೀಸೆ. ನೀಳವಾಗಿತ್ತು ತಲೆಗೂದಲು.

ಅಲ್ಲಿಯೇ ಹಿತ್ತಿಲ ಬೇಲಿಗೊರಗಿ ನಿಂತಿದ್ದ ಲಚ್ಚಿ ನೋವಿನ ಆಯಾಸದ ನಿಟ್ಟುಸಿರು ಬಿಟ್ಟು ಕಾತರ ತುಂಬಿದ ಧ್ವನಿಯಲ್ಲಿ ಕೇಳಿದಳು:

"ನೀವು ಓಗ್ತೀರಾ?"

"ಊಂ, ಬಿರ್ನೆ ಬಂದ್ಬಿಡ್ತೀವಿ" ಎನ್ನುತ್ತ ಆತ ಗುಡಿಸಲು ಕಡೆಗೆ ನೋಡಿ ಅಸಹನೆಯ ಸ್ವರದಲ್ಲಿ ಕರೆದ:

"ಅಪ್ಪಾ! ಒತ್ತಾಗೋಯ್ತು! ಒರಡಾನ!"

ಹೊರಬಂದವನು ಮನೆಯ ಹಿರಿಯ. ಮಾಸಿದ ಪಂಚೆ. ಹರಕಲು ಅಂಗಿಯ ಮೇಲಿದ್ದ ಹಳೆಯ ಕೋಟು. ಇಳಿಮುಖವಾಗಿದ್ದ ಬಿಳಿಮೀಸೆ. ಸುಕ್ಕುಗಳನ್ನು ಅವರಿಸಿದ್ದ ನರೆತ ಗಡ್ಡ. ತೆಳ್ಳಗಾಗಿದ್ದ ತಲೆಗೂದಲನ್ನು ಮುಚ್ಚಿದ್ದ ರುಮಾಲು. ಅಪನಂಬಿಕೆಯ ನೆಟ್ಟ ನೋಟವಾಗಿ ಹೆಪ್ಪುಗಟ್ಟಿದ್ದ ಕಣ್ಣುಗಳು. ಎಕ್ಕಡ ಮೆಟ್ಟಿ ಆತನೆಂದ:

"ನಡಿ"

ಸೊಸೆಯನ್ನು ಹುಡುಕಿಬಂದ ಮನೆಯೊಡತಿ ಬಾಗಿಲಲ್ಲೆ ತಡೆದು ನಿಂತಳು. ಮನೆಬಿಟ್ಟು ಹೊರಟಿದ್ದ ಮಗನನ್ನೂ ತನ್ನವನನ್ನೂ ಕಂಡಳು:

ಅವಳನ್ನು ದಿಟ್ಟಿಸಿ ಹಿರಿಯನೆಂದ:

"ಅದೇನೈತೋ ನೋಡ್ಬರ್ತೀನಿ"

........... ಬಿಸಿಲು. ಸೂರ್ಯ ನೆತ್ತಿಯಾಚೆಗೆ ಆಗಲೆ ಸರಿದಿದ್ದರೂ ಚುರುಕು ಮುಟ್ಟಿಸುತ್ತಿದ್ದ ಖಾರಬಿಸಿಲು. ಬೇಸಗೆಯೇನೊ ಮುಗಿಯುತ್ತ ಬಂದಿತ್ತು. ಆದರೆ, ಮೋಡಗಳ ಸುಳಿವಿರಲಿಲ್ಲ. ಹಾದಿ ನಡೆಯುತ್ತಿದ್ದ ಹಿರಿಯನನ್ನು ಎಂದಿನ ಸಂಕಟವೇ ಇಂದೂ ಬಾಧಿಸಿತು. ಮತ್ತೂ ಹತ್ತಾರು ದಿನ ಮಳೆ ಬರದೇ ಹೋದರೆ? ಈ ಸಲದ ಬಿತ್ತನೆಯಲ್ಲಿ ಕ್ಷಾಮರಾಕ್ಷಸ ಹೊಂಚುಹಾಕುತ್ತ ಅಡಗಿ ಕುಳಿತಿದ್ದ. ತಾಯ್ನೆಲ ಭಣಗುಡುತ್ತಿತ್ತು. ಪರೆಕಳಚಿದ ಹಾವು ಪ್ರಕೃತಿ. ಉದ್ದಕ್ಕೂ

ಒರಗಿತ್ತು ಆ ಬಿಳಿಯ ಪರೆ. ಪುಡಿಪುಡಿಯಾಗಿದ್ದ, ಕಣಕಣವಾಗಿದ್ದ ಕಾಲುಹಾದಿ. ದಾರಿ ತುಳಿಯುತ್ತ ಆ ಬಿಳಿಯ ಗೆರೆಯನ್ನು ಹಿರಿಯ ನೋಡಿದ. ದೃಷ್ಟಿಯೊಡನೆ ನಡು ಬಾಗಿತು. ಹೃದಯದ ಭಾರದಿಂದ ತಪ್ಪಿಸಿಕೊಂಡ ಬಿಸಿಯುಸಿರು ದೀರ್ಘವಾಗಿ ಹೊರಬಂತು.

ಹಿರಿಯನ ಸಂಕಟವನ್ನು ಗ್ರಹಿಸಿದ ರಾಮ ಕನಸಿನ ಲೋಕದಿಂದ ಕೆಳಕ್ಕಿಳಿದು ಬಂದ. ಎಂದಿಗಿಂತ ಭಿನ್ನವಾದ ಆ ದಿನದಲ್ಲೂ ಆ ಹೊತ್ತಿನಲ್ಲೂ ಹಾಗಿರಬೇಕೆ ತನ್ನ ತಂದೆ?

"ಏನಪ್ಪಾ ಅದು?"

"ಈ ದುರ್ಗತಿ ನಮಗೆ ಬಂತಲ್ಲಾ ಅಂತ ಯೋಚಿಸಿದ್ದೆ ಮಗಾ. "

ಬಿಸಿಲಿನಷ್ಟೇ ಬಿಸಿಯಾಗಿದ್ದ ಉಗುಳನ್ನು ಹಿರಿಯ ನುಂಗಿದ. 'ಒಂದೇ ಹಾಡು' ………. ಹೂಂ……… ಹೀಗಾಗಬಹುದೂಂತ ಯಾರಿಗೆ ಗೊತ್ತಿತ್ತು? ತನ್ನ ಹಿರಿಯ ಮಗನಿಗೇ ಈ ರೀತಿ ಹುಚ್ಚು ಹಿಡಿಯುವುದೆಂದರೆ? ಸಾಲದುದಕ್ಕೆ ಶಹರದಲ್ಲಿ ಓದುತ್ತಿದ್ದ ಎರಡನೆಯ ಮಗ ಕೃಷ್ಣ ಕೂಡಾ ............

'ಕಲಿಗಾಲ..........'

## 2

ಕೆಟ್ಟ ಸುದ್ದಿಯನ್ನು ಕೇಳಿದ ಆ ದಿನ ತನ್ನ ಓರಗೆಯವರೆಷ್ಟೋ ಜನ ನಕ್ಕಿದ್ದರು.

'ಆದರೆ ಹೋದರೆ, ಅಜ್ಜಿಗೆ ಮೀಸೆ ಬಂದರೆ..........! '

'ಏ - ಬಿಡಿ!'

ಗಾಳಿಯಲ್ಲಿ ಸುದ್ದಿ, ತೇಲಿ ಬಂದಿತ್ತು – ತೇಲಿ ಹೋಗಿತ್ತು.

ಸ್ವಲ್ಪ ಸಮಯದ ಅನಂತರ, ಆದನ್ನೆಲ್ಲರೂ ಮರೆತಿದ್ದ ಹೊತ್ತಿಗೆ, ಹೊಸ ಜನ ಅಲ್ಲಿಗೆ ಬಂದರು - ಹ್ಯಾಟು ಬೂಟು ತೊಟ್ಟ ಅಪರಿಚಿತರು; ಅವರ ಹಿಂದೂ ಮುಂದೂ ಓಡಾಡಿದರು ಗ್ರಾಮಾಧಿಕಾರಿಗಳು.

'ಹಳ್ಳಿಯನ್ನು ಬಿಟ್ಟು ಹೋಗ್ಬೇಕು. '

('ಆಹಾ! ಎಲ್ಲಿಗೆ ಯಾರಪ್ಪನ ಮನೆಗೆ?')

'ಏ ಗೌಡ! ನೀನೊಬ್ಬನೇ ಅಲ್ಲ ಕಣಯ್ಯ'

'ರೀ, ಗೌರವ ಕೊಟ್ಟು ಮಾತನಾಡಿ.'

"ಓ ಐ ಸೀ"

‘ಒಟ್ಟು ಹನ್ನೆರಡು ಹಳ್ಳಿ ಖಾಲಿಯಾಗ್ತವೆ.’

‘ಅನ್ನೆರಡು ಅಳ್ಳಿ?’

“ಹೂಂ. ದೇಸಾಯರು, ಜೋಡೀದಾರು, ಇನಾಂದಾರು – ಎಲ್ರೂ ಒಪ್ಕೊಂಡಿದ್ದಾರೆ. ಸಣ್ಣ ಪುಟ್ಟ ಆಸ್ತಿ ಇರೋ ನಿಮ್ಮದೇನಪ್ಪ ಇನ್ನು?”

ಮಹಾ ಬುದ್ಧಿವಂತರೇ ಸರಿ. ಚತುರೋಪಾಯಗಳೂ ಗೊತ್ತಿದ್ದುವು ಅವರಿಗೆ. ಪರಿಹಾರ-ಹಣ. ‘ಬೇರೆ ಕಡೆ ಭೂಮಿ ಕೊಂಡ್ಕೋಬಹುದು’ ಅಥವಾ ಹೊಲಕ್ಕೆ ಬದಲು ಹೊಲ (ಬಂಜರು ಭೂಮಿಗೇನು ಬರಗಾಲ?). ಸಾವಿರಾರು ಜನರಿಗೆ ಕೆಲಸ ಬೇರೆ.

“ಕೆಲಸ? ಎಂಥ ಕೆಲಸ?”

“ಕೂಲಿ ಕೆಲಸ.”

“ಕೂಲಿ...? ನಾವು ರೈತರು. ಕೂಲಿ-ನಾಲಿ ಮಾಡೋವರಲ್ಲ!”

“ಈ ರೈತರಿಗೆ ಒಂದೂ ಅರ್ಥವಾಗೋದಿಲ್ಲ.”

“ಹುಂ!”

“ಈ ಹಳ್ಳಿಗಳೆಲ್ಲ ನೀರಿನ ಕೆಳಗೆ ಮುಳುಗುತ್ವೆ ಗೌಡರೆ!”

“ನೀರಿನ ಕೆಳಗೆ? ಮುಣುಗುತ್ವೆ?”

“ಹೌದು. ಸಾವಿರ ಎಕರೆ ಮುಳುಗಿದರೇನ್ರಿ? ಲಕ್ಷ ಎಕರೆ ಭೂಮಿಗೆ ನೀರು ಸಿಗುತ್ತೆ. ಅಷ್ಟೇ ಅಲ್ಲ........”

“ಸಾಕು! ಸಾಕು!”

ಸಿಡಿಮಿಡಿಗೊಂಡ ತಾನು ದಡದಡನೆ ಅಲ್ಲಿಂದ ಹೊರಟುಬಿಟ್ಟಿದ್ದ. ರಾಮ ಮಾತ್ರ ಆ ಜನರ ಜತೆಯಲ್ಲಿ ಮಾತುಗಳಿಗೆ ಕಿವಿಗೊಡುತ್ತ ನಿಂತಿದ್ದ. ಕತ್ತಲಾಗುವ ಹೊತ್ತಿಗೆ ಮನೆಗೆ ಬಂದ.

“ಅಲ್ಲೇನೂ ಮಾಡ್ತಿದ್ದೆ ಇಷ್ಟೊತ್ತು?”

“ಇಕಾ, ಕಾಜಗ ಕೊಟ್ಟವ್ರೆ, ಇದರೊಳಗೆಲ್ಲಾ ಪಿರಿಂಟ್ ಮಾಡೈತೆ.”

“ಪಿರಿಂಟ್ ಮಾಡೈತೆ - ಮಣ್ಣು!”

* * *

ಮುಂದೆ ಆಗಬೇಕಾಗಿದ್ದುದು ಆಗಿಯೇ ಹೋಯಿತು. ರಾಮ ಪಲ್ಲವಿ ನುಡಿದ:

"ನಡಿ, ಓಗಾನ. ಎಲ್ಲಾರಿಗಾಗೋದು ನಮಗೂ ಆಗ್ತೇತೆ."

ಹೊಲವನ್ನು ಮಾರಲಿಲ್ಲ ನಾನು. ಬದಲಿ ಭೂಮಿಯನ್ನು ಕೊಟ್ಟರು. ಮೂರೆಕರೆಗೆ ಮೂರೆಕರೆ. ನದಿಯ ದಂಡೆಯಲ್ಲಲ್ಲ. ಕೆಳಕ್ಕೆ, ಒಳಕ್ಕೆ.

ಹುಟ್ಟಿ ಬೆಳೆದ ಹಳ್ಳಿಯ ಹನುಮಂತರಾಯನ ಗುಡಿಯ ಮುಂದೆ ನಿಂತು ನಾನೆಂದೆ:

"ಓಗ್ಬರ್ತೀವಪ್ಪಾ. ಅಳ್ಳಿ ಮುಣಿಗಿಸ್ತೌದು. ನಿನ್ನನ್ನು ಮುಣಿಗಿಸೋಕಾತದಾ? ಮನಿಷ್ಯರು ತಿಳೀದೆ ತಪ್ಮಾಡ್ತಾ ಅವರೆ. ಕ್ಷಮ್ಸಪ್ಪಾ."

ವಲಸೆ ಬಂದವರನ್ನು ಅಣಕಿಸಿತು ಬಂದಾಗಿದ್ದ ಹೊಸ ಮಣ್ಣು. ಆ ನೆಲಕ್ಕೆ ಕೈ ಬಡೆದು, ಅಂಥ ಸ್ಥಿತಿಗೆ ನಮ್ಮನ್ನು ತಂದವರಿಗೆ ನಾನು ಶಾಪವಿತ್ತೆ; ಹಣೆ ಚಚ್ಚಿಕೊಂಡು ಮನದಣಿಯೆ ಅತ್ತೆ.

.......... ಆ ದಿವಸದಿಂದ ಇವತ್ತಿನವರೆಗೆ – ಈ ಮೂರು ವರ್ಷಗಳ ಕಾಲ – ಏನನ್ನೆಲ್ಲ ಕಂಡೆ ನಾನು!

ಮೊದಮೊದಲು, ಎಲ್ಲೋ ಕೇಳಿದ ಯಾವುದೋ ಸುದ್ದಿ ಎನ್ನುವ ಹಾಗೆ - ಬಳಿಕ ಉತ್ಸಾಹದಿಂದ – ನನ್ನ ಮಗ ರಾಮನೇ ಬಂದು ಹೇಳುತ್ತಿದ್ದ:

"ಎಲ್ರೂ ಬಂದ್ಬಿಟ್ಟವ್ರೆ. ನದೀಲಿ ತಳ ಎಷ್ಟು ಆಳಕ್ಕೈತೆ ಅಂತ ಭೈರಿಗೆ ಕೊರೆದು ನೋಡ್ತವ್ರೆ. ದೊಡ್ಡೊಡ್ಡ ಲಾರಿಗ್ಳು ಬಂದವೆ - ಅತ್ತಿಪ್ಪತ್ತು, ಮಿಸ್ನುಗಳೂ ಯಂತ್ರಗಳೂ ಬಂದ್ದಿಟ್ಟೆವೆ. ಅದೇನೋ ಕ್ರೇನೂಂತ ತಗೋಂಡ್ಬಂದವ್ರೆ ಅಪ್ಪಾ. ತೆಂಗಿನಮರದಂಗೆ ಎತ್ತರಕ್ಕೈತೆ. ಎಂಗ್ಬೇಕಾದರೂ ತಿರುಗ್ತೇತೆ. ಕೈಯಿಂದ ಕಡ್ಡೀನ ಇಂಗೆತ್ತಿ ಆಂಗ್ಮಾಡಾಕಿಲ್ವಾ ನಾವು? – ಆಂಗೇನೆ, ಎಸ್ಟ್ ಬಾರಾದ್ಸಾಮಾನಿದ್ರೂ ಒಂದ್ಕಡೆಯಿಂದ ಇನ್ನೊಂದ್ಕಡೆಗಿಡ್ತೇವೆ."

ನಮ್ಮ ನದಿ. ಬೇಸಗೆಯಲ್ಲಿ ಕಿರುಬೆರಳಿನಷ್ಟು ನೀರು. ಮಳೆ ಬಂದಾಗ ಕೆರಳಿದ ಮಹಾ ಕಾಳಿ. ಏನಾದರೇನು? ಮನುಷ್ಯ ಮಾಡುವ ತಪ್ಪಿಗೆ, ಅದು ದೇವರು ಕೊಡುವ ಶಿಕ್ಷೆ. ಅಂಥ ದೇವರ ಶಕ್ತಿಯೊಡನೆ ಈ ಜನರ ಸೆಣಸಾಟ. ನಾಸ್ತಿಕರು! ಹುಂ!

ರಾಮನೆಂದ:

"ಹಾಫೀಸರ್‌ಗಳಲ್ಲಿ ಬಿರಾಮರು, ಲಿಂಗವಂತರು, ಒಕ್ಕಲಿಗರು, ಸಾಬರು, ಕಿರಸ್ತಾನರು – ಎಲ್ಲಾ ಜಾತಿಯವರೂ ಅವರೆ."

ಕಟ್ಟುನಿಟ್ಟಾಗಿ ನಾನೆಂದೆ:

"ಅವರ ಜತೆ ನೀನು ಸೇರ್ಕೊಬ್ಯಾಡ."

ದಿನ ಕಳೆದ ಹಾಗೆ ಜನರೆಲ್ಲ ಅವರ ಜತೆ ಸೇರಿದರು. ಕೆಲಸದ ಜಾಗಕ್ಕೆ ಅಂಟಿಕೊಂಡೇ ಊರು ಹುಟ್ಟಿತು.

ಎಲ್ಲೆಲ್ಲಿಂದಲೋ ಜನರು ಬಂದರು. ಸಾವಿರ - ಹತ್ತು ಸಾವಿರ - ಇಪ್ಪತ್ತು ಸಾವಿರ ಜನ. ಹೆಣ್ಣಾಳು, ಗಂಡಾಳು. ಹಟ್ಟಿಗಳನ್ನು ಕಟ್ಟಿದರು. ಜತೆಯಲ್ಲೇ ಹೋಟೆಲು ಬಂತು.... ದಿನಸಿನಂಗಡಿ, ಹೆಂಡದಂಗಡಿ............ ಮಣ್ಣು ಅಗೆಯುವವರು, ಕಲ್ಲು ಕಡಿಯುವವರು........ ಮನುಷ್ಯರು, ಯಂತ್ರಗಳು, ಕಿವಿ ಕಿವುಡಾಗುವ ಹಾಗೆ ಹಗಲೆಲ್ಲ ಸದ್ದು. ಮಣ್ಣು ತೋಡಿ ಕಲ್ಲಿರಿಸಿದರು. ಕಲ್ಲು, ಗಾರೆ; ಕಲ್ಲು ಗಾರೆ.

'ಮಳೆ ಬರಲಿ ಆಗ ತಿಳೀತದೆ' ಎಂದುಕೊಂಡೆ.

ಮಳೆ ಬಂತು. ಕಟ್ಟಿದ್ದು ಮಿಸುಕಲಿಲ್ಲ.

ನವರಾತ್ರಿಯ ರಜೆಯಲ್ಲಿ ಮನೆಗೆ ಬಂದ ಕೃಷ್ಣನೆಂದ:

"ಅಣೆಕಟ್ಟು ಕಟ್ಟಿದ್ಮೇಲೆ ಮಹಾಪೂರ ಬರೋದಿಲ್ಲ. ಕಾಲಿವೆ ಕಡಿದು, ಊರೂರಿಗೆ ನೀರು ತಗೊಂಡು ಹೋಗ್ತಾರೆ. ಎಲ್ಲೆಲ್ಲೂ ಬೆಳೆ ಬೆಳೀತದೆ. ವಿದ್ಯುಚ್ಛಕ್ತಿ ಉತ್ಪಾದಿಸ್ತಾರೆ. ಮನೆ ಮನೆಗೆ ದೀಪ ಬರ್ತದೆ. ಕಾರ್ಖಾನೆಗಳು ಹುಟ್ಕೋತವೆ. ನದೀಲಿ ದೊಡ್ಡ ದೊಡ್ಡ ದೋಣಿಗಳು ಸಂಚಾರ ಮಾಡ್ತವೆ."

ರೇಗುತ್ತ ನಾನೆಂದೆ:

"ನಮ್ಮ ಅಳ್ಳಿ ಏನಾಗ್ತೇತೆ?"

"ಅಳ್ಳಿ ಮುಳುಗೋಗ್ತದೆ."

"ಅಂಗಂತೀಯಾ ನೀನೂ?"

"ಈ ಪುಸ್ತಕದಲ್ಲಿ ಬರೆದವರೆ"

"ನಿನ್ನ ಪುಸ್ತಕನ ಸುಡ್ತು!"

ಹುಡುಗರು ಮೊದಲು ಕೆಟ್ಟರು. ವಯಸ್ಸಾದವರು ಆಮೇಲೆ. ಲೋಕ ತಲೆಕೆಳಗಾಗಿ ಹಾಳಾಗುತ್ತಿದ್ದುದನ್ನು ನೋಡಲು ನಾನೊಬ್ಬನೆ ಉಳಿದೆನೆನಿಸಿತು.....

ಭೂಮಿತಾಯಿ ಮುನಿದಳು. ಅರೆ ಹೊಟ್ಟೆ ಕೆಡವಿದಳು.

.......... ವರ್ಷ ಒಂದಾಯಿತು. ಅನಂತರವೂ ಒಂದು. ನದಿಗೆ ಅಡ್ಡವಾಗಿ ಮರಳಿನ ಗೋಡೆ ಕಟ್ಟಿ ಅದರ ಹಾದಿಯನ್ನೆ ಬದಲು ಮಾಡಿದರು. ಎರಡೂ ಕಡೆಗಳಿಂದ ಬಂದಿದ್ದ ಅಣೆಕಟ್ಟು ನಡುವೆ ಕೂಡಿಕೊಂಡಿತು. ನೀರು ನಿಂತು ಕೆರೆಯಾಯಿತು. ನದಿ ಆಳವಾಯಿತು.

ಆಗ ಬಲ್ಲಿದನಾಗಿದ್ದ ರಾಮನನ್ನು, ಕೆಣಕಿ ಕೇಳಿದೆ.

"ಅಳ್ಳಿಗಳನ್ನ ಯಾವತ್ತು ಮುಣುಗಿಸ್ತಾರೆ?"

"ಇನ್ನೇನು, ಮುಣುಗೋಗ್ತವೆ."

“ಉಂ! ಅನುಮಂತರಾಯನ ಗುಡಿಯೊಳಕ್ಕೆ ನೀರು ನುಗ್ಗಿ. ಆ ಮ್ಯಾಕೆ ಯೇಳ್ತಿನಿ!”

ಗುಡಿಯೊಳಕ್ಕೆ ನೀರು ನುಗ್ಗಿತು. ಗುಡಿ ಮುಳುಗಿತು. ಹನುಮಂತರಾಯ ಆಕ್ಷೇಪಿಸಲಿಲ್ಲ. ಕೆರೆ ಸರೋವರವಾಯಿತು. ಸರೋವರ ನೀರಸಾಗರವಾಯಿತು. ದೇವರು ತುಟಿಪಿಟ್ಟೆನ್ನಲಿಲ್ಲ.

ನನ್ನೊಳಗಿನದೇನೋ ಕುಸಿದುಬಿದ್ದಂತಾಯಿತು.

## ಲೇಖಕರ ಪರಿಚಯ



ನಿರಂಜನರು ದಕ್ಷಿಣ ಕನ್ನಡ ಜಿಲ್ಲೆಯ ಕುಳಕುಂದದಲ್ಲಿ ೧೯೨೪ರಲ್ಲಿ ಜನಿಸಿದರು. ಇವರ ನಿಜವಾದ ಹೆಸರು ಶಿವರಾಯ. ನಿರಂಜನ ಎನ್ನುವುದು ಕಾವ್ಯನಾಮ. ಪ್ರೌಢಶಾಲಾ ಶಿಕ್ಷಣದ ಬಳಿಕ ಇವರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ರಾಷ್ಟ್ರಬಂಧು, ತಾಯಿನಾಡು, ಜನವಾಣಿ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಇವರು ಅಂಕಣಗಾರರಾಗಿ ಪ್ರಸಿದ್ಧರಾಗಿದ್ದರು. ಇವರು ೮೦ ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಕಲ್ಯಾಣ ಸ್ವಾಮಿ, ರಂಗಮ್ಮನ ವಠಾರ, ಅಭಯ, ನಂದಗೋಕುಲ, ಮೃತ್ಯುಂಜಯ ಸ್ವಾಮಿ, ಅಪರಂಪಾರ, ಚಿರಸ್ಮರಣೆ ಮೊದಲಾಗಿ ೨೫ ಕಾದಂಬರಿಗಳನ್ನು ಬರೆದಿದ್ದಾರೆ. ೯ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ೧೯೯೨ರಲ್ಲಿ ಇವರು ನಿಧನ ಹೊಂದಿದರು. ಈ ಸಣ್ಣಕತೆಯು ನಿರಂಜನರ ‘ಒಂಟಿ ನಕ್ಷತ್ರ ನಕ್ಕಿತು’ ಎಂಬ ಕಥೆಯ ಸಂಗ್ರಹರೂಪವಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ರಾಮನ ಅಪ್ಪನ ಅಸಹನೆಗೆ, ಸಿಡಿಮಿಡಿಗೆ ಕಾರಣವೇನು?
2. ಅಣೆಕಟ್ಟು ನಿರ್ಮಾಣದಿಂದ ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತವೆ?
3. ಮುಳುಗಡೆಯಾಗುವ ಜಮೀನಿಗೆ ಕೊಡುವ ಪರಿಹಾರವೇನು?
4. ಅಣೆಕಟ್ಟು ನಡುವೆ ಕೂಡಿಕೊಂಡಾಗ ಏನಾಯಿತು?

## ಲೇಖನ ಬರೆಯಿರಿ

“ವಲಸೆ ಬಂದವರನ್ನು ಅಣಕಿಸಿತು ಬಂದಾಗಿದ್ದ ಹೊಸ ಮಣ್ಣು. ಆ ನೆಲಕ್ಕೆ ಕೈಬಡೆದು, ಅಂಥ ಸ್ಥಿತಿಗೆ ನಮ್ಮನ್ನು ತಂದವರಿಗೆ ನಾನು ಶಾಪವಿತ್ತೆ; ಹಣೆ ಚಚ್ಚಿಕೊಂಡು ಮನದಣಿಯೆ ಅತ್ತೆ.”

ರಾಮುವಿನ ಅಪ್ಪನ ಈ ಮಾತಿಗೆ ಕಾರಣವಾದ ಘಟನೆ ಮತ್ತು ಅದರ ಪರಿಣಾಮಗಳನ್ನು ವಿಶ್ಲೇಷಿಸಿ ಲೇಖನವೊಂದನ್ನು ಬರೆಯಿರಿ.

## ವಿಶ್ಲೇಷಣ ಟಿಪ್ಪಣಿ ಬರೆಯಿರಿ

ಊರಿನ ಅಭಿವೃದ್ಧಿಯ ವಿಚಾರದಲ್ಲಿ ಅಪ್ಪ ಮತ್ತು ಮಗನ ಧೋರಣೆಗಳ ಕುರಿತು ವಿಶ್ಲೇಷಣ ಟಿಪ್ಪಣಿ ಬರೆಯಿರಿ.

.

## ಪಾಠಭಾಗದ ಕೆಳಗಿನ ಸಾಲುಗಳನ್ನು ಗ್ರಾಮ್ಯ ಭಾಷೆಯಿಂದ ಶಿಷ್ಟಭಾಷೆಗೆ ಪರಿವರ್ತಿಸಿ ಬರೆಯಿರಿ.

ಹುಟ್ಟಿ ಬೆಳೆದ ಹಳ್ಳಿಯ ಹನುಮಂತರಾಯನ ಗುಡಿಯ ಮುಂದೆ ನಿಂತು ನಾನೆಂದೆ:

“ಓಗ್ಬತ್ತೀನವಪ್ಪಾ. ಅಳ್ಳಿ ಮುಣಿಗಿಸ್ವೌದು. ನಿನ್ನನ್ನು ಮುಣಿಗಿಸೋಕಾತದಾ? ಮನಿಸ್ಯರು ತಿಳೀದೆ ತಪ್ಮಾಡ್ತಾ ಅವರೆ. ಕ್ಷಮ್ಸಪ್ಪಾ.”

## ಆಲಂಕಾರಿಕ ವಿಶೇಷತೆಗಳನ್ನು ಗುರುತಿಸಿರಿ

ಕೆಳಗೆ ಕೊಡಲಾದ ಪಾಠಭಾಗದಲ್ಲಿನ ಆಲಂಕಾರಿಕ ವಿಶೇಷತೆಗಳನ್ನು ಗುರುತಿಸಿ ಬರೆಯಿರಿ.

ಈ ಸಲದ ಬಿತ್ತನೆಯಲ್ಲಿ ಕ್ಷಾಮರಾಕ್ಷಸ ಹೊಂಚುಹಾಕುತ್ತ ಅಡಗಿ ಕುಳಿತಿದ್ದ. ತಾಯ್ನೆಲ ಭಣಗುಡುತ್ತಿತ್ತು. ಪರೆಕಳಚಿದ ಹಾವು ಪ್ರಕೃತಿ. ಉದ್ದಕ್ಕೂ ಒರಗಿತ್ತು ಆ ಬಿಳಿಯ ಪರೆ. ಪುಡಿಪುಡಿಯಾಗಿದ್ದ, ಕಣಕಣವಾಗಿದ್ದ ಕಾಲುಹಾದಿ.

## ಚರ್ಚಾ ಟಿಪ್ಪಣಿ ಬರೆಯಿರಿ

ಕೆಳಗಿನ ವಿಷಯದ ಬಗ್ಗೆ ತರಗತಿಯಲ್ಲಿ ಚರ್ಚಾಕೂಟ ನಡೆಸಿ ಒಂದು ಟಿಪ್ಪಣಿ ಬರೆಯಿರಿ.

**ಗ್ರಾಮೀಣ ಸುಸ್ಥಿರ ಅಭಿವೃದ್ಧಿಯು ಗ್ರಾಮಗಳಿಗೆ ಮಾರಕವೋ? ಪೂರಕವೋ?**

# ಕಟ್ಟುವೆವು ನಾವು

- ಎಂ. ಗೋಪಾಲಕೃಷ್ಣ ಅಡಿಗ



ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು
ಹೊಸ ನೆತ್ತರುಕ್ಕುಕ್ಕಿ ಆರಿ ಹೋಗುವ ಮುನ್ನ,

ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ,
ಉತ್ಸಾಹ ಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು!

ನಮ್ಮೆದೆಯ ಕನಸುಗಳೆ ಕಾಮಧೇನು
ಆದಾವು, ಕರೆದಾವು ವಾಂಛಿತವನು;
ಕರೆವ ಕೈಗಿಹುದಿದೋ ಕಣಸುಗಳ ಹರಕೆ;
ಗುರಿ ತಪ್ಪದೊಮ್ಮುಖದ ಬಯಕೆ ಬೆಂಬಲಕೆ!

ಜಾತಿಮತಭೇದಗಳ ಕಂದಕವು ಸುತ್ತಲೂ,
ದುರ್ಭೇದ್ಯವೆನೆ ಕೋಟೆ ಕೊತ್ತಲಗಳು;
ರೂಢಿರಾಕ್ಷಸನರಸುಗೈಯುವನು, ತೋಳ್ತಟ್ಟಿ
ತೊಡೆತಟ್ಟಿ ಕರೆಯುವನು ಸಂಗ್ರಾಮಕೆ !

ನಾವು ಹಿಂತೆಗೆವೆವೇ? ವೀರ ತರುಣರು ನಾವು!
ಒಂದೆ ನೆಗೆತಕೆ ನೆಗೆವೆವೋ ಕಂದಕವನು,
ಕುಟ್ಟಿ ಪುಡಿ ಮಾಡುವೆವು ಕೋಟೆಗಳನು,
ಎದೆಯ ಮೆಟ್ಟಿ ಮುರಿಯುವೆವಸುರರಟ್ಟೆಗಳನು!

ಕೋಟೆಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು,
ನಮ್ಮ ಸಾವೇ ನೋವೆ ಹೊಸ ನಾಡ ತೊಟ್ಟಿಲು
ಆದಾವು; ಅಂಜುವೆದೆ ನಮ್ಮದಲ್ಲ;
ಸೋಲುಬಗೆ ವೀರನಿಗೆ ಸಲ್ಲ,ಹೊಲ್ಲ!

ಇಂದು ಬಾಳಿದು ಕೂಳ ಕಾಳೆಗವು; ಹೊಟ್ಟೆಯೇ
ಕೇಂದ್ರವಾಗಿದೆ ನರನ ಜೀವಿತಕ್ಕೆ;
ಅನ್ನದನ್ಯಾಯದಾವಾಗ್ನಿಯಲಿ ಕರಗುತಿದೆ
ನರತೆ, ಸಂಸ್ಕೃತಿ, ಪ್ರೀತಿ, ದಿವದ ಬಯಕೆ!

ಇರುವೆಲ್ಲವನು ಎಲ್ಲ ಜನಕೆ ತೆರವಾಗಿಸುವ
ಸಮಬಗೆಯ ಸಮಸುಖದ ಸಮದುಃಖದ
ಸಾಮರಸ್ಯದ ಸಾಮಗಾನಲಹರಿಯ ಮೇಲೆ
ತೇಲಿ ಬರಲಿದೆ ನೋಡು, ನಮ್ಮ ನಾಡು!

## ಕವಿ ಪರಿಚಯ



ಕನ್ನಡದ ಪ್ರಮುಖ ನವ್ಯ ಕವಿಗಳಲ್ಲಿ ಒಬ್ಬರಾದ ಎಂ. ಗೋಪಾಲಕೃಷ್ಣ ಅಡಿಗರು ಕುಂದಾಪುರ ತಾಲೂಕು ಕೆರ್ಗಾಲು ಗ್ರಾಮದ ಮೊಗೇರಿಯಲ್ಲಿ ೧೮-೦೨-೧೯೧೮ ರಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಬಿ. ಎ. ಆನರ್ಸ್ ಪದವಿಯನ್ನು ಹಾಗೂ ನಾಗಪುರ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸ್ನಾತಕೋತ್ತರ ಪದವಿಯನ್ನು ಪಡೆದರು. ಪ್ರೌಢಶಾಲಾ ಅಧ್ಯಾಪಕರಾಗಿ, ಇಂಗ್ಲೀಷ್ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ ಮತ್ತು ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದರು. ಬೆಂಗಳೂರಿನಲ್ಲಿ ನಿವೃತ್ತ ಜೀವನ ಕಳೆದ ಅಡಿಗರು ೧೪-೧೧-೧೯೯೨ ರಂದು ನಿಧನರಾದರು. ಭಾವತರಂಗ, ಕಟ್ಟುವೆವು ನಾವು, ನಡೆದು ಬಂದ ದಾರಿ, ಚಂಡೆ ಮದ್ದಳೆ, ಭೂಮಿಗೀತ, ಆಕಾಶ ದೀಪ, ಅನಾಥೆ, ಹುಲಿರಾಯ ಮತ್ತು ಇತರ ಕಥೆಗಳು ಮೊದಲಾದವುಗಳು ಅಡಿಗರ ಕೃತಿಗಳಾಗಿವೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಬೀರ್ ಸಮ್ಮಾನ್ ಪ್ರಶಸ್ತಿ ಹಾಗೂ ೧೯೯೩ ರಲ್ಲಿ ಮರಣೋತ್ತರ ಪಂಪ ಪ್ರಶಸ್ತಿಗಳು ಸಂದಿವೆ.

ಈ ಕವಿತೆಯನ್ನು ಎಂ.ಗೋಪಾಲಕೃಷ್ಣ ಅಡಿಗರ 'ಕಟ್ಟುವೆವು ನಾವು' ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಹೊಸ ನಾಡನ್ನು ಯಾವಾಗ ಕಟ್ಟಬೇಕು?
2. ಕವಿಯ ದೃಷ್ಟಿಯಲ್ಲಿ ಕಾಮಧೇನು ಯಾವುದು?
3. ನಮ್ಮ ಸುತ್ತಲೂ ಇರುವ ಕಂದಕಗಳು ಯಾವುವು?
4. ಹೊಸನಾಡ ತೊಟ್ಟಿಲು ಯಾವುದು?
5. ನಮ್ಮ ನಾಡು ಹೇಗೆ ತೇಲಿ ಬರಲಿದೆ ಎಂದು ಕವಿಗಳು ಹೇಳುತ್ತಾರೆ?

## ವಿಂಗಡಿಸಿ ಬರೆಯಿರಿ

ಹೊಸನೆತ್ತರುಕ್ಕುಕ್ಕಿ - ಈ ಪದವನ್ನು ಹೊಸ ನೆತ್ತರು + ಉಕ್ಕಿ + ಉಕ್ಕಿ ಎಂದು ವಿಂಗಡಿಸಿ ಬರೆಯಬಹುದು. ಇದೇ ರೀತಿಯಲ್ಲಿ ಕೆಳಗಿನ ಪದಗಳನ್ನು ವಿಂಗಡಿಸಿ ಬರೆಯಿರಿ.

- ತಪ್ಪದೊಮ್ಮುಖದ
- ರೂಢಿರಾಕ್ಷಸನರಸುಗೈಯುವನು
- ಮುರಿಯುವೆವಸುರರಟ್ಟೆಗಳನು
- ಅನ್ನದನ್ಯಾಯ

## ಆಶಯ ಬರೆಯಿರಿ

'ಕಟ್ಟುವೆವು ನಾವು' ಕವಿತೆಯ ಆಶಯವನ್ನು ಬರೆಯಿರಿ.

## ಸಮರ್ಥಿಸಿ ಬರೆಯಿರಿ

'ನಮ್ಮ ನಾಡನ್ನು ಸಾಮರಸ್ಯದ ಬೀಡಾಗಿಸುವಲ್ಲಿ ಯುವಜನರ ಪಾತ್ರ ಮಹತ್ತರವಾದುದು'. ಕವನದಲ್ಲಿ ಬರುವ ಈ ಆಶಯದ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಸಮರ್ಥಿಸಿ ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಲಾದ ಪದ್ಯದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಇಂದು ಬಾಳಿದು ಕೂಳ ಕಾಳೆಗವು, ಹೊಟ್ಟೆಯೇ
ಕೇಂದ್ರವಾಗಿದೆ ನರನ ಜೀವಿತಕ್ಕೆ;
ಅನ್ನದನ್ಯಾಯದಾವಾಗ್ನಿಯಲಿ ಕರಗುತಿದೆ
ನರತೆ, ಸಂಸ್ಕೃತಿ, ಪ್ರೀತಿ, ದಿವದ ಬಯಕೆ!

## ಭಾವನಾಮ ಪದಗಳನ್ನು ಬರೆಯಿರಿ

ಸಮರಸ - ಸಾಮರಸ್ಯ

ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಪದಗಳನ್ನು ಭಾವನಾಮ ಎನ್ನುತ್ತಾರೆ.

ಸಾಮರಸ್ಯ ಎಂಬ ಪದವು ಸಮರಸ ಎಂಬ ಪದದ ಭಾವನಾಮವಾಗಿದೆ. ಇದೇ ರೀತಿಯಲ್ಲಿ ಇತರ ಭಾವನಾಮ ಪದಗಳನ್ನು ಸಂಗ್ರಹಿಸಿ ಬರೆಯಿರಿ.

## ಕವನ ರಚಿಸಿರಿ

ನಾಡು ನುಡಿಯ ಕುರಿತು ಕವನವೊಂದನ್ನು ರಚಿಸಿ ತರಗತಿಯಲ್ಲಿ ಮಂಡಿಸಿರಿ.

# ಬಸರೂರು ಪಂಚಾಯತಿಕೆ

**- ದಿ. ಬೇಕಲ ರಾಮನಾಯಕ**

'ಕುಂಬಳೆ ಸೀಮೆಯ ಸತ್ಯ' 'ಬಸರೂರು ಪಂಚಾಯತಿಕೆ' 'ನಂದನ ಬದುಕು ನರಿ ನಾಯಿ ತಿಂದು ಹೋಯಿತು' 'ಆಟಿಡ್ ಬತ್ತೆ ಕಳೆಂಜೆ ಮಾರಿ ಕಳೆಪೆನೋ' ಮೊದಲಾದ ಹಲವಾರು ಪಡೆನುಡಿಗಳು ನಮ್ಮಿತ್ತ ಕಡೆಯ ಕನ್ನಡಿಗರಲ್ಲಿಯೂ ತುಳುವರಲ್ಲಿಯೂ ಬಳಕೆಯಾಗಿ ಬಂದಿವೆ. ಜನಜೀವನದಲ್ಲಿ ಇವೆಲ್ಲ ಪ್ರಭಾವಪೂರ್ಣವಾಗಿವೆ. ಭಾಷಾಭ್ಯಾಸಕ್ಕೆ ಪ್ರೇರಕವಾಗಿವೆ.

ಉಡುಪಿಯ ಪರಿಸರದಲ್ಲೆಲ್ಲ ಗೋಚರಕ್ಕಾಗಿ ಬಿಟ್ಟ ಹಲವು ಹೊಲಗಳ ಎಲ್ಲೆಕಟ್ಟಿನಲ್ಲಿ ಹನುಮಂತನ ಚಿಹ್ನೆಯುಳ್ಳ ಗಡಿಕಲ್ಲುಗಳು ನಿಂತಿವೆ. ಅವೆಲ್ಲ 'ಪರಪಳಿ ನಾಯಕನ (ಕೆಲವರೆನ್ನುವಂತೆ ಪಳ್ಳಟ ನಾಯಕನ) ಧರ್ಮ'ವೆಂದು ಜನರು ಇಂದಿಗೂ ಹೇಳುತ್ತಿರುವರು. ಉಡುಪಿಯ ಕಿಲಿಂಜೆಯೆಂಬಲ್ಲಿದ್ದ ಒಂದು ಶಿಲಾಶಾಸನದಿಂದ ಅವನು ಸಾವಿರ ವರ್ಷದ ಹಿಂದಿನವನೆಂದು ತಿಳಿಯಲಾಗಿದೆ. ಬಸರೂರಿನ ಒಂದು ಪಂಚಾಯತಿಕೆಯಲ್ಲಿ ಒಂದು ಕಲ್ಲಿನ ಮರಿಗೆಯಷ್ಟು ಜಾಗವನ್ನು ಪಡೆದ ಅವನ ಯುಕ್ತಿಯು ಜನಜನಿತವಾಗಿ ಬಂದಿದೆ.



ಪರಪಳಿಯು ಉಡುಪಿಯ ಬನ್ನಂಜೆಯಲ್ಲಿ ಒಂದು ಹನುಮಂತನ ಗುಡಿಯ ಹಿಂದೆ ಒಂದು ಮುರುಕು ಗುಡಿಸಲಿನಲ್ಲಿ ವಾಸಮಾಡುತ್ತಿದ್ದನು. ಹನುಮಂತನಲ್ಲಿ ನೆಟ್ಟ ಮನಸುಳ್ಳವನಾಗಿ ಧನಿಯ ಹೊಲಗಳಲ್ಲಿ ಗೆಯ್ಯುತ್ತಾ ದಿನದೂಡುತ್ತಿದ್ದ. ಕಡುಬಡವನಾದರೂ ಅವನ ಮನಸ್ಸು ದೊಡ್ಡದು. ಯಾರತ್ತರೂ ಅವನ ಕಣ್ಣಲ್ಲಿ ನೀರೂರುವುದು. ಮೂಕಪ್ರಾಣಿಗಳ ಸಂಕಟವನ್ನು ಕಂಡರೆ ಅವನ ಎದೆ ಕರಗುವುದು. ದೀನಾರ್ತರ ಆಪತ್ತಿಗೆ ಒದಗಬೇಕೆಂದೂ ದನ ಕರುಗಳಿಗೆ ದಯೆದೋರಬೇಕೆಂದೂ ಅವನ ಹೃದಯವು ಸದಾ ತುಡಿಯುತ್ತಿತ್ತು. ದೇವರೊಡನೆ ಅದನ್ನೇ ಬೇಡುತ್ತಿದ್ದನು.

ಅವನ ಧನಿ ಅವನಿಗೊಂದು ಕಡೆಗಂದಿಯನ್ನು ಉಚಿತವಾಗಿ ಕೊಟ್ಟಿದ್ದನು. 'ಆ ಕರೀಗೆ ಕರು ಹೆಚ್ಚಿ ಮರೀಗೆ ಮರಿ ಹೆಚ್ಚಿ' ಅವನ ಹಟ್ಟಿ ತುಂಬಿತ್ತು. 'ವರಾಕೊಂದು ಹಿಡಿ ಹುಲ್ಲಾದ್ರೂ ಕೊಂಡು ಮೇಯಿಸೇನು' ಎಂಬ ಭಾಷೆತೊಟ್ಟು ಆ ನಡೆಗಳನ್ನು ಅವನು ಅಕ್ಕರೆಯಿಂದ ಸಾಕುತ್ತಿದ್ದನು. ಮುದ್ದು ಕರುಗಳು ಜಿಗಿಯುತ್ತ ನೆಗೆಯುತ್ತ ಅಂಗಳದಲ್ಲಿ ಕುಣಿದಾಡುತ್ತಿದ್ದರೆ ಅವನ ಹೊಟ್ಟೆ ತಣಿಯುತ್ತಿತ್ತು. ಕರುಗಳ ಬಾಯ ಹಾಲನ್ನು ಹಿಂಡಿ ಮಾರುವುದು ಪಾಪವೆಂದೆಣಿಸಿದ್ದನು. ಮದ್ದಿಗೋ ಪಥ್ಯಕ್ಕೋ ಯಾರು ಕೇಳಿದರೂ ಹಾಲು ತುಪ್ಪವನ್ನು ಕೊಡುವನು.

ಒಂದು ದಿನ ಅವನು ತಿರುಪತಿಗೆ ಹೋಗುತ್ತಿದ್ದ ಒಂದು ಪರಿಸೆಯೊಂದಿಗೆ ಹೊರೆಯಾಳಾಗಿ ಹೋದ. ನಾಲ್ಕು ಜನರ ಹೊರೆಯನ್ನು ಹೊತ್ತುಕೊಂಡು, ಹಸಿವು ಬಾಯಾರಿಕೆಯ ಗೊಡವೆಯಿಲ್ಲದೆ, ಎದೆಯಾಳದಿಂದ ಉಕ್ಕಿ ಬಂದ ಭಕ್ತಿಯಿಂದ 'ಗೋವಿಂದಾ' ಎನ್ನುತ್ತಾ ದಾರಿ ನಡೆದು ಗಿರಿ ಏರಿದ. ಬೆಟ್ಟದ ಮೇಲೆ ಎಲ್ಲರೂ ಅವನನ್ನು ತಿರಸ್ಕರಿಸುವವರೆ. ಪರಪಳಿ, ಶ್ರೀನಿವಾಸನನ್ನು ಅನನ್ಯ ಭಕ್ತಿಯಿಂದ ಆರಾಧಿಸಿ ಬರುವಾಗ ಬೆಟ್ಟದ ಮೇಲೆ ಅವನ ಆರಾಧ್ಯ ದೇವತೆಯಾದ ಹನುಮಂತನೇ ಒಂದು ಮಂಗದ ರೂಪದಲ್ಲಿ ಕಾಣಿಸಿಕೊಂಡು ಅವನಿಗೆ ಒಂದು ಪರುಷಮಣಿಯನ್ನು ಕೊಟ್ಟ.

ಪರುಷ ಮಣಿಯನ್ನು ಪಡೆದ ಮೇಲೆ ಪರಪಳಿ ಪರೋಪಕಾರದಲ್ಲೇ ನಿರತನಾದ. ಸಹಜವಾದ ಅವನ ಗೋಭಕ್ತಿ ಪುಟಗೊಂಡಿತು. ಪವಿತ್ರಕ್ಷೇತ್ರಗಳಿಗೆ ಯಾತ್ರೆ ಮಾಡಿದ. ಹೋದಲ್ಲೆಲ್ಲ ಗೋಮಾಳಕ್ಕಾಗಿ ಹೊಲಗಳನ್ನು ಕೊಂಡುಕೊಂಡು ಉಂಬಳಿ ಬಿಡುತ್ತಾ ಬಂದ. ಬನ್ನಂಜೆಯ ಸುತ್ತಮುತ್ತಣ ಹಳ್ಳಿಗಳಲ್ಲಿ ಹಲವು ಹನುಮನ ಗುಡಿಗಳನ್ನು ಸ್ಥಾಪಿಸಿದ. ದೀನ ದರಿದ್ರರ ಕಷ್ಟಕ್ಕೆ ಒದಗುವುದೇ ಅವನ ಹವಣಾಯಿತು. ಸರ್ವಭೂತಗಳಲ್ಲೂ ಭಗವಂತನನ್ನು ಕಂಡ. ಮಾಡುವ ಕೆಲಸವೆಲ್ಲ ಭಗವಂತನ ಸೇವೆ ಎಂದು ಮನಗಂಡ. ನಿರುದ್ಯೋಗಿಗಳಿಗೆ ಭೂಮಿ ಕಾಣಿಕೆಯನ್ನು ಒದಗಿಸಿಕೊಟ್ಟು ಅವರನ್ನು ಬೇಸಾಯಕ್ಕೆ ಹಚ್ಚಿದ. ಬಡಬಗ್ಗರಿಗೆಲ್ಲ ಮನೆಮಾರುಗಳನ್ನು ಕಟ್ಟಿಸಿಕೊಟ್ಟು ಅವರ ತಿರಬೂಡನ್ನು ಸಿರಿಬೂಡನ್ನಾಗಿ ಮಾರ್ಪಡಿಸಿದ. ಹೀಗೆ ಪರೋಪಕಾರಿಯಾದ ಪರಪಳಿಯನ್ನು ಜನರೆಲ್ಲ ಬಾಯಿತುಂಬಾ ಹೊಗಳಿ ಹರಸಿದರು. ಬಾಯಿ ಬಾರದ ಹಸುಗಳು ಹಾಲಿನ ಅಭಿಷೇಕ ಮಾಡಿದುವು.

ಒಮ್ಮೆ ಪರಪಳಿ ವೈಭವದ ಬಸರೂರಿಗೆ ಹೋಗಿದ್ದ. ಆಗ ಬಸರೂರು ದೊಡ್ಡ ಬಂದರು.ಮಂಡಿಕೇರಿಯಲ್ಲಿ ಜವಳಿ ಮಳಿಗೆಗಳು, ಚಿನಿವಾರಕಟ್ಟೆಗಳು, ಬಣ್ಣ ಬಿಳಿದಿನ ಬಗೆ ಬಗೆಯ ಸಾಲಂಗಡಿಗಳು ಶೋಭಿಸುತ್ತಿದ್ದುವು. ಎತ್ತಲೂ ಕೆತ್ತಿದ ಶಿಲೆ, ಚಿತ್ತಾರದ ಕೋಟೆ, ಸಾಲುಮಂಟಪ, ಮೇಲುಪ್ಪರಿಗೆ, ಶಿವಾಲಯ, ಬಸದಿಗಳು ಕಂಗೊಳಿಸುತ್ತಿದ್ದುವು.

ಹಳ್ಳಿಯ ಪರಪಳಿ ಆ ಪಟ್ಟಣದ ಐಸಿರಿ, ಐಭೋಗಗಳನ್ನೆಲ್ಲ ಕಂಡು ಬೆರಗಾದ. ಆದರೆ ಎಲ್ಲಿ ನೋಡಿದರೂ ಗೋಚರದ ಹೊಲಗಳು ಕಾಣಿಸಲಿಲ್ಲ. ಅರವಟ್ಟಿಗೆಗಳಾಗಲಿ, ಗೋಕಲ್ಲುಗಳಾಗಲಿ ಕಣ್ಣಿಗೆ ಬೀಳಲಿಲ್ಲ. ಗೋಪ್ರಿಯನಾದ ಅವನಿಗೆ ಅದೊಂದು ಅರಕೆ ಎನಿಸಿತು. ಹೃದಯಕ್ಕೆ ಕರುಣೆಯು ಹರಿದು ಬಂತು. ಗೋಚರಕ್ಕೆ ಒಂದು ಹೊಲವನ್ನು ಕೊಂಡುಕೊಂಡು ದತ್ತಿ ಬಿಡಬೇಕೆಂಬ ಬಯಕೆ ಸಿಡಿದು ನಿಂತಿತು. ಹಲವರನ್ನು ವಿಚಾರಿಸಿದ. ಆದರೆ ಆ ಹುಂಬನ ಮಾತಿಗೆ ಕಿವಿ ಕೊಡುವವರಾರು? ಬಸರೂರು ಬಂದರಕ್ಕೆ ಭೂಮಿ ಬಿಕರಿಗೆ ಬಂದಿದ್ದಾನೆ ಈ ಬಿಕನಾಸಿ! ಹೊಲದಷ್ಟೇ ಹೊನ್ನು ಹರವಬೇಕೆಂಬುದನ್ನು ಇವನೇನು ಬಲ್ಲ! ಎಂದು ಎಲ್ಲರೂ ಅವನನ್ನು ಹೀಗಳೆಯುವವರೇ. ಆದರೆ ಪರಪಳಿ ತನ್ನ ಸಂಕಲ್ಪವನ್ನು ಬಿಡಲಿಲ್ಲ. ಶ್ರದ್ಧೆ ನಮ್ಮದು, ಸಿದ್ಧಿ ಭಗವಂತನದು ಎಂದು 'ಗೋವಿಂದಾ' ಎನ್ನುತ್ತಾ ಕಂಡವರ ಕಾಲು ಕಟ್ಟಿ ಬೇಡಿಕೊಂಡ. ಯಾರೋ ಒಬ್ಬರು ಪುಣ್ಯಾತ್ಮರಿಗೆ ದಯೆ ಹುಟ್ಟಿತು. ಊರ ಪಂಚರೆಲ್ಲ ಕೂಡಿ ಪಂಚಾಯಿತಿಕೆ ಮಾಡಿ ಅವನಿಗೆ ಬುದ್ಧಿ ಕಲಿಸಬೇಕೆಂದು ಒಂದು ಸಂಚು ಮಾಡಿದರು. ಒಂದು ಕಲ್ಲುಮರಿಗೆ ತುಂಬಾ ಹೊನ್ನು ಕೊಟ್ಟರೆ ಆ ಮರಿಗೆಯಷ್ಟು ಜಾಗ ಕೊಡಬಹುದೆಂದು ತೀರ್ಮಾನಿಸಿದರು. ಈ ಭಿಕಾರಿ ಅಷ್ಟು ಹೊನ್ನನ್ನು ಎಲ್ಲಿಂದ ಕೊಟ್ಟಾನೆಂದು ಅವರೆಣಿಕೆಯಾಗಿತ್ತು.

ಪರಪಳಿ ದೊಡ್ಡ ಕಲ್ಲಮರಿಗೆಯೊಂದನ್ನು ಚಾತುರ್ಯದಿಂದ ಕಡಿಸಿದ. ಅದರ ಬಾಯಿ ಕಿರಿದಾಗಿ ಒಡಲು ನಿಡಿದಾಗಿತ್ತು. ಹೊರಬದಿಯಲ್ಲಿ ಉಬ್ಬಿಕೊಂಡು ಹೆಚ್ಚು ಜಾಗವನ್ನು ಆಕ್ರಮಿಸುತ್ತಿತ್ತು. ಪರಪಳಿ ಮಾತಿನಂತೆ ಮರಿಗೆ ತುಂಬ ಹೊನ್ನು ಕೊಟ್ಟು ಮರಿಗೆಯಷ್ಟು ನೆಲ ಪಡೆದ. ಕುಳುವಾಡಿಗಳು ಒಡ್ಡಿದ ಜಾಲದಲ್ಲಿ ಅವರೇ ಸಿಕ್ಕಿಬಿದ್ದರು. ಅವರು ಎಣಿಸಿದಷ್ಟು ನೆಲವನ್ನು ಮರಿಗೆ ಆವರಿಸಿತ್ತು. ಎಣಿಸಿದಷ್ಟು ಹೊನ್ನನ್ನು ಅದು ಕಬಳಿಸಿರಲಿಲ್ಲ. ಅಂದಿನಿಂದ ಈ 'ಬಸರೂರು ಪಂಚಾಯಿತಿಕೆ'ಯ ಮಾತು ಹಬ್ಬಿತು. ಹೀಗೆ ಯುಕ್ತಿಯುಕ್ತವಾಗಿ ತೀರಿಸುವ ಪಂಚಾಯತಿಕೆಯನ್ನು 'ಬಸರೂರು ಪಂಚಾಯತಿಕೆ' ಎನ್ನುವ ರೂಢಿಯಾಯಿತು. ತುಳುನಾಡ ಕೂಟ ಪಂಚಾಯತಿಕೆಗಳಲ್ಲಿ ಈ ನುಡಿಗಟ್ಟು ಇಂದಿಗೂ ಕೇಳಿ ಬರುತ್ತಿದೆ.

## ಲೇಖಕರ ಪರಿಚಯ



ಬೇಕಲ ರಾಮನಾಯಕರು ೧೯೦೨ ಅಕ್ಟೋಬರ್ ೨೬ರಂದು ಕಾಸರಗೋಡಿನ ಬೇಕಲದಲ್ಲಿ ಜನಿಸಿದರು. ವೃತ್ತಿಯಲ್ಲಿ ಅಧ್ಯಾಪಕರಾಗಿದ್ದ ಅವರು ನಾಡ ಕತೆಗಳು, ತೆಂಕನಾಡ ಐತಿಹ್ಯಗಳು, ಕೆಚ್ಚಿನ ಕಿಡಿಗಳು, ಬಾಳಿದ ಹೆಸರು ಮತ್ತು ಇತರ ಐತಿಹ್ಯಗಳು, ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಕಥನ ಕವನ, ನಾಟಕಗಳನ್ನು ಬರೆದಿದ್ದಾರೆ. ಕನ್ನಡ ನಾಡು ನುಡಿಯ ಉಳಿವಿಗಾಗಿ ಅವಿಶ್ರಾಂತವಾಗಿ ದುಡಿದ ಇವರು ೨೧.೧೧.೧೯೬೯ರಂದು ತೀರಿಕೊಂಡರು.

'ಬಸರೂರು ಪಂಚಾಯತಿಕೆ' ಎಂಬ ಕತೆಯನ್ನು 'ಬೇಕಲ ರಾಮನಾಯಕ ಸಾಹಿತ್ಯ ಸಂಪುಟ'ದಿಂದ ಆರಿಸಲಾಗಿದೆ.

## ವಿಶದೀಕರಣ

**ಗೋಕಲ್ಲು** - ಸತ್ತ ವ್ಯಕ್ತಿಗಳ ಹೆಸರಿನಲ್ಲಿ ದನಗಳ ಮಂದೆಯ ನಡುವೆ ಕಲ್ಲೊಂದನ್ನು ನೆಡುತ್ತಾರೆ. ಇದನ್ನು ಗೋಕಲ್ಲು ಅಥವಾ ಗೋವಿನ ಕಲ್ಲು ಎನ್ನುತ್ತಾರೆ. ಈ ಸಂಪ್ರದಾಯದಲ್ಲಿ ಗ್ರಾಮದ ಗೋವುಗಳ ಕ್ಷೇಮ ಮತ್ತು ಹಳ್ಳಿಗರಿಗೆ ಅವುಗಳ ಮೇಲಿರುವ ಪ್ರೀತಿಯು ಅಡಗಿದೆ.

**ಉಂಬಳಿ** - ಉಣ್ + ಬಳಿ. ವಂಶ ಪರಂಪರಾಗತವಾಗಿ ಉಪಯೋಗಿಸಲು ಕೊಟ್ಟಿರುವ ದತ್ತಿ. ರಾಜರು ಮತ್ತು ಶ್ರೀಮಂತರು ದೇವಸ್ಥಾನ, ಮಠಗಳಂಥ ಧಾರ್ಮಿಕ ಸಂಸ್ಥೆಗಳಿಗೆ, ವಿದ್ವಾಂಸರಿಗೆ, ಗಮನಾರ್ಹ ಸೇವೆಯನ್ನು ಸಲ್ಲಿಸಿದವರಿಗೆ, ಯುದ್ಧದಲ್ಲಿ ನೆರವಾದವರಿಗೆ, ಅಧಿಕಾರಿಗಳಿಗೆ ಜಮೀನುಗಳನ್ನು ದತ್ತಿಯ ರೂಪದಲ್ಲಿ ಬಿಟ್ಟುಕೊಟ್ಟು ಅವುಗಳ ಕಂದಾಯವನ್ನು ಮನ್ನಾ ಮಾಡುತ್ತಿದ್ದರು. ಇಂಥ ಹೊಲಗಳೇ ಉಂಬಳಿ ಜಮೀನುಗಳು.

**ಪಡೆನುಡಿಗಳು** - ನುಡಿಗಟ್ಟುಗಳು, ಜನಬಳಕೆಯ ಮಾತುಗಳು.

**ಕುಂಬಳೆ ಸೀಮೆಯ ಸತ್ಯ** - ತುಳುನಾಡಿನ ಅನೇಕ ಸೀಮೆಗಳಲ್ಲಿ ಕುಂಬಳೆ ಸೀಮೆಯೂ ಒಂದು. ಈ ಸೀಮೆಯನ್ನು ಕುಂಬಳೆ ಅರಸರು ಆಳುತ್ತಿದ್ದರು. ಈ ಸೀಮೆಯಲ್ಲಿ ಆರಾಧನೆಗೊಳ್ಳುವ ಅನೇಕ ದೈವಗಳಲ್ಲಿ ಬೀರ್ನಾಳ್ವ ದೈವವು ಪ್ರಸಿದ್ಧವಾದುದು. ಈ ದೈವವನ್ನು ‘ಕುಂಬಳೆ ಸೀಮೆಯ ಸತ್ಯ’ ಎನ್ನುತ್ತಾರೆ. ತುಳುನಾಡಿನಲ್ಲಿ ಆರಾಧನೆಗೊಳ್ಳುವ ದೈವಗಳನ್ನು ‘ಸತ್ಯೊಲು’ ಎಂದು ಕರೆಯುವ ವಾಡಿಕೆ ಇದೆ.

**ನಂದನ ಬದುಕು ನರಿನಾಯಿ ತಿಂದು ಹೋಯಿತು** - ನಂದರಾಯ ಒಬ್ಬ ರಾಜ. ಎಲಿಮಲೆಯಿಂದ ತುಳುನಾಡಿನವರೆಗೆ ಅವನ ಅರಸೊತ್ತಿಗೆ ಹಬ್ಬಿತ್ತು. ಅವನು ಕ್ರೂರಿಯಾಗಿದ್ದ. ನರಬಲಿ ಕೊಡುತ್ತಿದ್ದ. ಇಂಥ ಕ್ರೌರ್ಯಗಳಿಂದ ಬೇಸತ್ತ ಪ್ರಜೆಗಳು ಅವನನ್ನು ಬಹಿಷ್ಕರಿಸಿದರು. ಇದರಿಂದ ಅವನ ಬದುಕು ಹಾಳಾಯಿತು. ಆದ್ದರಿಂದ ಈ ಮಾತು ರೂಢಿಗೆ ಬಂದಿತು.

**ಆಟಿಡ್ ಬತ್ತೆ ಕಳೆಂಜೆ ಮಾರಿ ಕಳೆಪೆನೋ** - ಆಟಿ ತಿಂಗಳಲ್ಲಿ ಬರುವ ಕಳಂಜನು ಜನರಿಗೆ ಬರುವ ಮಾರಕ ರೋಗ ರುಜಿನಗಳನ್ನು ಕೊಂಡೊಯ್ಯುತ್ತಾನೆ ಎಂಬ ನಂಬಿಕೆ ತುಳುನಾಡಿನಲ್ಲಿದೆ.

## ಉತ್ತರಿಸಿರಿ

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಪರಪಳಿ ನಾಯಕನ ಕುರಿತು ಜನಜನಿತವಾಗಿರುವ ವಿಚಾರ ಯಾವುದು?
2. ಪರಪಳಿ ನಾಯಕನ ಗುಣಸ್ವಭಾವಗಳು ಹೇಗಿದ್ದವು?
3. ಪರಪಳಿ ನಾಯಕನನ್ನು ಜನರು ಹೊಗಳಿ ಹರಸಲು ಕಾರಣವೇನು?
4. ಬಸರೂರಿನ ವೈಭವವನ್ನು ವಿವರಿಸಿರಿ.
5. ತುಳುನಾಡ ಕೂಟ ಪಂಚಾಯತಿಕೆಗಳಲ್ಲಿ ಇಂದಿಗೂ ಕೇಳಿ ಬರುವ ನುಡಿಗಟ್ಟು ಯಾವುದು?

## ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದವನ್ನು ಬಳಸಿ ಬೇರೆ ವಾಕ್ಯವನ್ನು ರಚಿಸಿರಿ.

- ಕರ್ಣನು ಕೊಡುಗೈದಾನಿ ಎಂಬ ವಿಚಾರವು ಜನಜನಿತವಾಗಿತ್ತು.
- ಹುಣ್ಣಿಮೆಯ ಚಂದಿರನು ನಯನಮನೋಹರವಾಗಿ ಕಂಗೊಳಿಸುತ್ತಿದ್ದನು.

## ಪಾತ್ರಚಿತ್ರಣ ಮಾಡಿರಿ

'ಬಸರೂರು ಪಂಚಾಯತಿಕೆ' ಪಾಠದಲ್ಲಿ ಬಂದಿರುವ ಪರಪಳಿ ನಾಯಕನ ಪಾತ್ರ ಚಿತ್ರಣವನ್ನು ಮಾಡಿರಿ.

## ಟಿಪ್ಪಣಿ ಬರೆಯಿರಿ

ಪರಪಳಿ ನಾಯಕನು ಬಸರೂರಿನವರ ಸವಾಲನ್ನು ಎದುರಿಸಿ ಗೆದ್ದ ಬಗೆಯನ್ನು ಟಿಪ್ಪಣಿಯಾಗಿ ಬರೆಯಿರಿ.

## ಸಂಭಾಷಣೆ ಬರೆಯಿರಿ

ಊರ ಕುಳವಾಡಿಗಳು ಪರಪಳಿ ನಾಯಕನಿಗೆ ಒಡ್ಡಿದ ಜಾಲದಲ್ಲಿ ಅವರೇ ಸಿಕ್ಕಿಬಿದ್ದ ಸನ್ನಿವೇಶವನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

## ವ್ಯಕ್ತಿ ಪರಿಚಯ ಬರೆಯಿರಿ

ನಿಮ್ಮ ಸುತ್ತಮುತ್ತಲಿನ 'ನೆಲ ಸಾಧಕ' (ಕೃಷಿಕ) ರೊಬ್ಬರ ಮಾಹಿತಿ ಸಂಗ್ರಹಿಸಿ ವ್ಯಕ್ತಿ ಪರಿಚಯ ಬರೆಯಿರಿ.

## ಸನ್ಮಾನ ಪತ್ರ ಬರೆಯಿರಿ

ನಾಡಿನ ಅಭಿವೃದ್ಧಿಗಾಗಿ ಶ್ರಮಿಸಿದ ಪರಪಳಿನಾಯಕನನ್ನು ಅಭಿನಂದಿಸಲು ಬಸರೂರಿನವರು ತೀರ್ಮಾನಿಸಿದ್ದಾರೆ ಎಂದು ಕಲ್ಪಿಸಿಕೊಂಡು ಒಂದು ಸನ್ಮಾನ ಪತ್ರವನ್ನು ತಯಾರಿಸಿರಿ.

## ನುಡಿಚಿತ್ರ ಬರೆಯಿರಿ

'ಆ ಕರೀಗೆ ಕರು ಹೆಚ್ಚಿ ಮರೀಗೆ ಮರಿ ಹೆಚ್ಚಿ ಅವನ ಹಟ್ಟಿ ತುಂಬಿತ್ತು.'

'ವರಾಕೊಂದು ಹಿಡಿ ಹುಲ್ಲಾದ್ರೂ ಕೊಂಡು ಮೇಯಿಸೇನು' ಎಂಬ ಭಾಷೆತೊಟ್ಟು ಆ ನಡೆಗಳನ್ನು ಅವನು ಅಕ್ಕರೆಯಿಂದ ಸಾಕುತ್ತಿದ್ದನು.

ಪಾಠದಲ್ಲಿ ಬಂದಿರುವ ಮೇಲಿನ ಮಾತಿನ ಹಿನ್ನೆಲೆಯಲ್ಲಿ ಇಂದಿನ ಗ್ರಾಮೀಣ ಬದುಕಿನ ಚಿತ್ರಣವನ್ನು ನುಡಿಚಿತ್ರದ ರೂಪದಲ್ಲಿ ಬರೆಯಿರಿ.

# 5. ಕಲೆ - ಸಂಸ್ಕೃತಿ



ಕಲೆ ಮತ್ತು ಸಂಸ್ಕೃತಿಗಳು ಒಂದು ಜನತೆಯ ಸಮಗ್ರ ಜೀವನ ವಿಧಾನವನ್ನು ಹೇಳುತ್ತವೆ. ಜನತೆಯ ಧರ್ಮ, ಮೌಲ್ಯ, ಸಾಹಿತ್ಯ, ಉಡುಗೆ-ತೊಡುಗೆ, ಆಹಾರ ವಿಧಾನಗಳು, ಉದ್ಯೋಗ, ಕಾನೂನು, ಆಚರಣೆ ಇತ್ಯಾದಿ ಎಲ್ಲವನ್ನು ಇವು ಒಳಗೊಳ್ಳುತ್ತವೆ. ಭಾರತದ ಕಲೆ ಮತ್ತು ಸಂಸ್ಕೃತಿಗಳು ವಿಶ್ವದಲ್ಲೇ ಮಾನ್ಯತೆಯನ್ನು ಪಡೆದಿರುವುದು ಹೆಮ್ಮೆಯ ವಿಷಯ. ವಿಶ್ವದಲ್ಲೇ ಉತ್ಕೃಷ್ಟವಾದ ಕಲೆ ಮತ್ತು ಸಂಸ್ಕೃತಿ ಪರಂಪರೆಯನ್ನು ನಮ್ಮ ಮಕ್ಕಳು ತಿಳಿದುಕೊಳ್ಳಬೇಕಾದುದು ಅತ್ಯಗತ್ಯ.

ಈ ನಿಟ್ಟಿನಲ್ಲಿ ನಮ್ಮ ಸಂಸ್ಕೃತಿಯ ಒಂದು ಅಂಗವಾದ ಜನಪದ ಆಟದ ಕಥೆಯನ್ನು ತಿಳಿಸುವ ಅಮೃತ ಸೋಮೇಶ್ವರರು ಬರೆದ 'ಚೆನ್ನೆಮಣೆಯ ಹಿಂದಿನ ವಿಧಿ' ಎಂಬ ಒಂದು ನಾಟಕವನ್ನು ಕೊಡಲಾಗಿದೆ. ಪುರಾಣದ ಕಥೆಗಳನ್ನು ತಿಳಿದುಕೊಳ್ಳುವುದರೊಂದಿಗೆ ದಾನ ಧರ್ಮದ ಬಗ್ಗೆ ತಿಳಿದುಕೊಳ್ಳಲು ರಾಘವಾಂಕ ಕವಿ ಬರೆದ 'ಹರಿಶ್ಚಂದ್ರ ಕಾವ್ಯ'ದ ಒಂದು ಭಾಗವನ್ನು ಇಲ್ಲಿ ಅಳವಡಿಸಲಾಗಿದೆ. ಅಲ್ಲದೆ ನಮ್ಮ ಕಾಸರಗೋಡಿನ ಗಂಡು ಕಲೆಯಾದ ಯಕ್ಷಗಾನದ ಬಗ್ಗೆ ಮಾಹಿತಿಗಳನ್ನು ನೀಡುವ ವಿ.ಜೆ. ನಾಯಕರು ಬರೆದ 'ಯಕ್ಷಗಾನ' ಎಂಬ ಒಂದು ಲೇಖನವನ್ನು ಈ ಘಟಕದಲ್ಲಿ ಸೇರಿಸಿಕೊಳ್ಳಲಾಗಿದೆ.

ಘಟಕದ ಆರಂಭದಲ್ಲಿ ನಮ್ಮ ಸಂಸ್ಕೃತಿ ಕಲೆಗಳನ್ನು ಪ್ರತಿಬಿಂಬಿಸುವ ಕೆಲವು ಚಿತ್ರಗಳನ್ನು ಪ್ರವೇಶ ಚಟುವಟಿಕೆಯಾಗಿ ನೀಡಲಾಗಿದೆ.

ನಮ್ಮ ಭವ್ಯ ಸಂಸ್ಕೃತಿ ಕಲೆಗಳ ಬಗ್ಗೆ ಇನ್ನಷ್ಟು ಆಸಕ್ತಿಯಿಂದ ಅಧ್ಯಯನ ನಡೆಸಲು ಈ ಘಟಕವು ಪ್ರೇರಣೆಯಾಗಲಿ. ಈ ಸಂಸ್ಕೃತಿ, ಕಲೆಗಳು ಮುಂದಿನ ಪೀಳಿಗೆಗೂ ತಲುಪುವಂತಾಗಲಿ.

















- ಮೇಲೆ ನೀಡಲಾದ ಚಿತ್ರಗಳ ಕುರಿತು ನಿಮ್ಮ ಅನಿಸಿಕೆಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ಚೆನ್ನೆಮಣೆಯ ಹಿಂದಿನ ವಿಧಿ!

**- ಅಮೃತ ಸೋಮೇಶ್ವರ**

**ನೋಟ - ೧**

[ಪರ್ಮಾಲೆ ಬಲ್ಲಾಳನ ಬೀಡಿನ ಒಳಕೊಠಡಿ ಕೆತ್ತನೆಯ ಸೊಬಗಿನ ಮಂಚದಲ್ಲಿ ಬಲ್ಲಾಳ ಕುಳಿತಿದ್ದಾನೆ. ಒಮ್ಮೆ ಆಕಳಿಸಿ ಎದ್ದುನಿಂತು ಕಂಡಿಯ ಮೂಲಕ ಮಳೆ ಸುರಿಯುವುದನ್ನು ನೋಡುತ್ತಾನೆ. ಬೇಸರವನ್ನು ಪ್ರಕಟಿಸುತ್ತ..]

ಬಲ್ಲಾಳ : ಸುಡುಗಾಡು ಮಳೆ! ಹನಿಕಡಿಯುವುದೇ ಇಲ್ಲ! ಎಷ್ಟು ದಿನ ಆಯ್ತು! ಹೊರಗೆ ತಲೆಯಿಕ್ಕುವುದೇ ಕಷ್ಟ!

[ಬಲ್ಲಾಳನ ಮಡದಿ ಮಾಣಿಗ ತಿನಿಸಿನ ಒಂದು ತಟ್ಟೆಯೊಂದಿಗೆ ಸಮೀಪಕ್ಕೆ ಬರುತ್ತಾಳೆ]

ಮಾಣಿಗ : ಇಕೊಳ್ಳಿ ಅಕ್ಕಿಹುಡಿ ಉಂಡೆ, ಚಕ್ಕುಲಿ; ಬೇಸರಕ್ಕೆ ಬಾಯಾಡಿಸಿಕೊಳ್ಳಿ.

ಬಲ್ಲಾಳ : ಹಾಂ, ಅದಾಗಬಹುದು! ಬಾ, ನೀನೂ ಸ್ವಲ್ಪ ತೆಕ್ಕೋ.

[ಮಂಚದಲ್ಲಿ ಕುಳಿತು ಇಬ್ಬರೂ ತಿನಿಸುಗಳನ್ನು ಕುರುಕುತ್ತಾರೆ]

ಮಾಣಿಗ : ಅಬ್ಬಾ ಮಳೆಯೆಂದರೆ ಜಿರಾಪತ್ತು ಮಳೆ! ಹಿಡಿದರೆ ಬಿಡಲು ತಿಳಿಯದು.

ಬಲ್ಲಾಳ : ಮಾಣಿಗ, ಮಳೆಯಿಂದಾಗಿ ಬೇಸರಹಿಡಿದು ಹೋಗಿದೆ! ಒಂದಾಟ ಚೆನ್ನೆ ಆಡೋಣವೆ? ತುಂಬಾ ದಿನವಾಯ್ತಲ್ಲ ಆಡದೆ?

ಮಾಣಿಗ : ಹೌದು, ನನಗೂ ಆಡೋಣವೆನಿಸುತ್ತದೆ. [ವಿನೋದ ಧ್ವನಿಯಲ್ಲಿ] ಆದರೆ ಆಡಲಿಕ್ಕೆ ಸರಿಯಾದ ಚೆನ್ನೆಮಣೆ ಬೇಕಲ್ಲ?

ಬಲ್ಲಾಳ : ಹಾಗೆಂದರೆ?

ಮಾಣಿಗ : ಎಂದರೆ ಮತ್ತೇನಿಲ್ಲ; ಮರದ ಚೆನ್ನೆಮಣೆಯಲ್ಲಿ ಹೊಂಗಾರಕನ ಕಾಯಿಗಳಿಂದ ಆಡಲು ನನಗೆ ತಿಳಿಯದು.

ಬಲ್ಲಾಳ : ಓಹೊ!

ಮಾಣಿಗ : ನನ್ನ ಸೋದರ ಮಾವನ ಮನೆಯಲ್ಲಿ ಬಂಗಾರದ ಮಣೆ ಇದೆ. ಮುತ್ತಿನ ಹರಳುಗಳಿವೆ! ಬೇಕಾದರೆ ತರಿಸುತ್ತೇನೆ.

ಬಲ್ಲಾಳ : [ಅಸಮಾಧಾನದಿಂದ] ನಿನ್ನ ಮಾವ ಸಾಮಾನ್ಯದವರಲ್ಲ ಎಂದು ನನಗೂ ಗೊತ್ತು. ಅವರಲ್ಲಿ ಸಿರಿಸಂಪತ್ತು ಹೆಚ್ಚಾಗಿರಬಹುದು. ನಮ್ಮಲ್ಲಿ ಕಡಿಮೆಯಾಗಿರಬಹುದು. ಆದರೆ ನೀನು ಹಂಗಿಸಬೇಕಾಗಿಲ್ಲ!

| | | |
|---|---|---|
| ಮಾಣಿಗ | : | [ನಗುತ್ತ] ಏನು, ತಮಾಷೆಗೆ ಹೇಳಿದರೂ ಕೋಪಮಾಡುತ್ತೀರಲ್ಲ? ಮೂಗಿನ ತುದಿಯಲ್ಲಿ ಕೋಪವಪ್ಪ ನಿಮಗೆ! |
| ಬಲ್ಲಾಳ | : | ಕೋಪವೆಲ್ಲಿ ಬಂತು? ಇಕೋ ಬೀಗದ ಕೈ. ಬೀಡಿನ ತೆಂಕಣ ಕೋಣೆಯಲ್ಲಿರುವ ಕಲ್ಲ ಕಲಂಬಿಯ ಬಾಗಿಲು ತೆರೆ; ಅದರಲ್ಲಿ ಬಂಗಾರದ ಚೆನ್ನೆಮಣೆ, ಮುತ್ತಿನ ಹರಳು ಇದೆ; ತೆಕ್ಕೊಂಡು ಬಾ. |
| ಮಾಣಿಗ | : | ಓ! ನನಗಿದು ಗೊತ್ತೇ ಇರಲಿಲ್ಲ! |
| ಬಲ್ಲಾಳ | : | ಇದ್ದುದನ್ನು ಹೇಳಿಕೊಳ್ಳುವ ಅಭ್ಯಾಸ ನನಗಿಲ್ಲ! ಹೋಗಲಿ, ಚೆನ್ನೆಮಣೆ ತಾ. [ಮಾಣಿಗ ದೀಪ ಉರಿಸಿಕೊಂಡು ಕತ್ತಲು ತುಂಬಿದ ಆ ಕೋಣೆಗೆ ಹೋಗಿ ಕಲಂಬಿಯ ಬೀಗ ತೆರೆದು ಚೆನ್ನೆಮಣೆ ಮತ್ತು ಹರಳುಗಳನ್ನು ತರುತ್ತಾಳೆ. ಎದುರು ಬದುರಾಗಿ ಕುಳಿತು ಗಂಡ ಹೆಂಡಿರು ಚೆನ್ನೆಯಾಟ ಪ್ರಾರಂಭಿಸುತ್ತಾರೆ.] |
| ಮಾಣಿಗ | : | ನೀವೇ ಮೊದಲು ಆಡಿ! |
| ಬಲ್ಲಾಳ | : | ಆಗಲಿ! (ಆಟ ತೊಡಗುತ್ತದೆ. ಮೊದಲ ಆಟದಲ್ಲಿ ಬಲ್ಲಾಳ ಸೋಲುತ್ತಾನೆ.) |



| | | |
|---|---|---|
| ಮಾಣಿಗ | : | ಮೊದಲ ಆಟದಲ್ಲೆ ಬಲ್ಲಾಳರು ಸೋತಿರಿ! |
| ಬಲ್ಲಾಳ | : | [ಸಪ್ಪೆ ಮುಖ ಹಾಕಿಕೊಂಡು] ಆಗಲಿ, ಮುಂದೆ ನೋಡೋಣ. |
| | | [ಆಟ ಮುಂದುವರಿಯುತ್ತದೆ. ಬಲ್ಲಾಳ ಪುನಃ ಸೋಲುತ್ತಾನೆ. 'ಥತ್' ಅಂತ ತಲೆ ಚಚ್ಚಿಕೊಳ್ಳುತ್ತಾನೆ.] |
| ಮಾಣಿಗ | : | [ನಗುತ್ತ] ಸ್ವಲ್ಪ ಮನಸ್ಸು ಕೊಟ್ಟು ಆಡಿ ಬಲ್ಲಾಳರೆ! |
| | | [ಬಲ್ಲಾಳ ಪುನಃ ಸೋಲುತ್ತಾನೆ. ಮುಖ ಕಪ್ಪೇರತೊಡಗುತ್ತದೆ] |
| | | ಏನು ಆಟ ಮರೆತೇಬಿಟ್ಟಿದ್ದೀರಾ? |
| | | [ಮಾಣಿಗ ಗಹಗಹಿಸುತ್ತಾಳೆ. ಬಲ್ಲಾಳ ತುಟಿ ಕಚ್ಚುತ್ತಾನೆ. ನಾಲ್ಕೈದನೆಯ ಆಟಗಳಲ್ಲೂ ಮಾಣಿಗನೇ ಗೆಲ್ಲುತ್ತಾಳೆ] |
| ಬಲ್ಲಾಳ | : | ದರಿದ್ರ ಆಟ, ಛೇ! (ನೆಲವನ್ನೊಮ್ಮೆ ಸಿಟ್ಟಿನಿಂದ ಒದೆಯುತ್ತಾನೆ] |
| ಮಾಣಿಗ | : | ಈವತ್ತು ಎಡದಿಂದ ಎದ್ದಿರೋ ಹೇಗೆ? 'ಪೊರಿ'ಯ ಹೊರೆ ತುಂಬಾ ಆಯ್ತು! |
| ಬಲ್ಲಾಳ | : | [ಪ್ರಯತ್ನಪೂರ್ವಕ ನಗುತ್ತ] ನೀನು ಬೆಳಗ್ಗೆ ನರಿಯ ಮೋರೆ ನೋಡಿರಬೇಕು! |
| ಮಾಣಿಗ | : | ಇಲ್ಲಪ್ಪಾ, ನಾನು ನೋಡಿದ್ದು ನಿಮ್ಮ ಮೋರೆ! |
| | | [ಬಲ್ಲಾಳ ನಕ್ಕನಾದರೂ ಒಳಗೆ ಕಹಿ ಇದೆ. ಮತ್ತೆ ಆಟ ಸಾಗುತ್ತಿರಲು] |
| ಬಲ್ಲಾಳ | : | ಮಾಣಿಗ, ಬಾಯಾರಿಕೆ ಆಗುತ್ತಿದೆಯಲ್ಲ.... |
| ಮಾಣಿಗ | : | ತಡೆಯಿರಿ, ಈಗ ಬಂದೆ. |
| | | [ಚೆನ್ನೆಯ ಹರಳುಗಳನ್ನು ಒಮ್ಮೆ ದಿಟ್ಟಿಸಿ ಒಳಗೆ ಹೋಗುತ್ತಾಳೆ. ಬೆಳ್ಳಿಯ ಗಿಂಡಿಯಲ್ಲಿ ಬಿಸಿ ಹಾಲು ತರುತ್ತಾಳೆ. ಅವಳು ಬರುವುದರೊಳಗೆ ಬಲ್ಲಾಳ ಚೆನ್ನೆಮಣೆಯನ್ನು ತಿರುಗಿಸಿಟ್ಟು ಗುಳಿಗಳಲ್ಲಿದ್ದ ಹರಳುಗಳನ್ನು ತಪ್ಪಿಸಿ ಇಡುತ್ತಾನೆ. ಮಾಣಿಗ ಬರುವಾಗ ಹೊಸ್ತಿಲನ್ನು ಎಡವುತ್ತಾಳೆ. ಹಾಲು ಸ್ವಲ್ಪ ಚೆಲ್ಲುತ್ತದೆ.] |
| ಬಲ್ಲಾಳ | : | ಏನೇ ಅದು ಮಾಣಿಗ! ಯಾಕಷ್ಟು ಗಡಿಬಿಡಿ? ಕಾಲು ಸ್ವಲ್ಪ ಎತ್ತಿ ಇಟ್ಟರೆ ಹೊಸ್ತಿಲು ಎಡಹುವುದಿಲ್ಲ; ತಲೆ ಸ್ವಲ್ಪ ತಗ್ಗಿಸಿದರೆ ದಾರವಂದ ಬಡಿಯುವುದಿಲ್ಲ! |
| ಮಾಣಿಗ | : | ಆಯ್ತಪ್ಪ, ನಿಮ್ಮಿಂದಲೇ ಇದೆಲ್ಲ ಕಲಿಯಬೇಕು ನಾನು!.... ಇಕೊಳ್ಳಿ ಹಾಲು. |
| | | [ಹಾಲಗಿಂಡಿಯನ್ನು ಬಲ್ಲಾಳನ ಕೈಗೆ ಕೊಡುತ್ತಾಳೆ. ಚೆನ್ನೆಮಣೆಯತ್ತ ನೋಡಿದಾಗ ಬಲ್ಲಾಳನ ವಂಚನೆ ಅರಿವಾಗುತ್ತದೆ. ಅವಳಿಗೆ ಸಿಟ್ಟು ಕೆದರುತ್ತದೆ.] |
| | | ಇದೇನು ಮಣೆ ತಿರುಗಿದೆ! ಹರಳು ತಪ್ಪಿದೆ? |

| | | |
|---|---|---|
| ಬಲ್ಲಾಳ | : | ಎಲ್ಲಿ, ಎಲ್ಲಿ? |
| ಮಾಣಿಗ | : | ಎಲ್ಲೂ ಅಲ್ಲ, ಇಲ್ಲೇ! ನೀವು ಆಟ ತಪ್ಪಿಸಿದ್ದೀರಿ! |
| ಬಲ್ಲಾಳ | : | ಛೇ, ಛೇ! ನಾನೇಕೆ ತಪ್ಪಿಸಬೇಕು? ನಾನು ಮಣೆಯನ್ನು ಮುಟ್ಟಲೇ ಇಲ್ಲ! |
| ಮಾಣಿಗ | : | ಮತ್ತೇನಿದು ಭೂತದ ಚೇಷ್ಟೆಯೋ? ಕೈ ಹಿಡಿದ ಹೆಂಡತಿಯಲ್ಲೂ ಮೋಸವೇ? ಛೀ! [ಎಡಗೈಯಿಂದ ಮಣೆಯನ್ನು ನೂಕಿಬಿಡುತ್ತಾಳೆ. ಮಣೆ ಕಾಲದೆಸೆಗೆ ಉರುಳುತ್ತದೆ. ಹರಳುಗಳು ಚೆಲ್ಲಾಪಿಲ್ಲಿ!] |
| ಬಲ್ಲಾಳ | : | [ಸಿಟ್ಟಿನಿಂದ) ಏನೆ? ಆಟ ತಪ್ಪಿದರೇನಂತೆ? ಏನು ಲೋಕ ಮುಳುಗಿತೆ? ದೊಡ್ಡ ಸಂಗತಿ ಮಾಡುತ್ತೀಯಲ್ಲ? |
| ಮಾಣಿಗ | : | ದೊಡ್ಡ ಸಂಗತಿಯಲ್ಲದೆ! ಹೆಂಡತಿಯ ಜೊತೆಗೇ ಗಂಡ ಇಂಥ ಮೋಸದಾಟ ಆಡಿದರೆ ಮತ್ತೇನುಳಿಯಿತು? ನಿಮ್ಮನ್ನಿನ್ನು ನಾನು ನಂಬುವಂತಿಲ್ಲ. ನಿಮ್ಮ ಸಹವಾಸವೂ ಸಾಕು! |
| ಬಲ್ಲಾಳ | : | ಏನೇ ನಾನು ಅಂಥ ಮೋಸ ಮಾಡಿದ್ದು? ಏನೋ ತಮಾಷೆಗೆ ಆಟವನ್ನು ಒಂದಿಷ್ಟು ಆಚೆ ಈಚೆ ಮಾಡಿದೆ ಅಷ್ಟೆ. ಗಂಡ ಹೆಂಡಿರೊಳಗೆ ವಿನೋದಕ್ಕೂ ಎಡೆ ಇಲ್ಲವೇ? |
| ಮಾಣಿಗ | : | ಇದೆಂಥಾ ವಿನೋದ? ಹೆಂಡತಿಯಿಂದ ಸೋಲಾಗುವುದನ್ನು ತಪ್ಪಿಸಲು ನೀವು ಮಾಡಿದ ತಂತ್ರ! ನಾನಿದನ್ನು ಎಂದೂ ಮನ್ನಿಸಲಾರೆ! |
| ಬಲ್ಲಾಳ | : | ಅದಕ್ಕೆ ಹಿರಿಯರು ಆಡಿದ ಪವಿತ್ರ ಚೆನ್ನೆಮಣೆಯನ್ನು ಕಾಲಡಿಗೆ ಹಾಕಿದೆಯ? ಎಷ್ಟು ಸೊಕ್ಕು ನಿನಗೆ! |
| ಮಾಣಿಗ | : | ಈ ತಟಪಟಕ್ಕೆಲ್ಲ ಯಾರು ಹೆದರುತ್ತಾರೆ? |
| ಬಲ್ಲಾಳ | : | ಹೆದರಿಕೆ ಇಲ್ಲವೇ? ಅಂಕೆ ಇಲ್ಲದ ಹೆಣ್ಣೆ! [ಸಿಟ್ಟೇರಿ ಕಪಾಳಕ್ಕೆ ಪಟೀರನೆ ಒಂದೇಟು ಬಿಗಿಯುತ್ತಾನೆ. ತುರುಬನ್ನು ಹಿಡಿದು ಆಚೆಗೆ ನೂಕುತ್ತಾನೆ. ಮಾಣಿಗ ಬುಸುಗುಟ್ಟುತ್ತಾ ಒಳಕೋಣೆಗೆ ಹೋಗಿ ಬರಿನೆಲದಲ್ಲಿ ಬಿದ್ದುಕೊಳ್ಳುತ್ತಾಳೆ. ಕಣ್ಣೀರು ಕೋಡಿ ಹರಿಯುತ್ತದೆ. ಬಲ್ಲಾಳನಿಗೆ ಕಸಿವಿಸಿಯಾಗುತ್ತದೆ. ಸಿಟ್ಟು ಇಳಿದಾಗ ಪಶ್ಚಾತ್ತಾಪವಾಗುತ್ತದೆ. ತುಸು ಹೊತ್ತಿನ ಬಳಿಕ ಮಾಣಿಗ ಮಲಗಿದಲ್ಲಿಗೆ ಹೋಗುತ್ತಾನೆ.]<br>ಮಾಣಿಗ, ಮಾಣಿಗ! [ಆಕೆಯಿಂದ ಉತ್ತರವಿಲ್ಲ] ನಾನೊಂದು ಹೊಡೆದುಬಿಟ್ಟೆ ಅಂತ ಹೀಗೂ ಕೋಪವೆ?... ಛೇ, ಏಳು ಏಳು! ನನಗೆ ಹಸಿವಾಗ್ತದೆ. ಊಟಕ್ಕೆ ಬಡಿಸು. ನೋಡು, ಹುಡುಗಾಟ ಮಾಡಬೇಡ, ಏಳು! [ಮಾಣಿಗ ಮಿಸುಕಾಡುವುದಿಲ್ಲ, ಬಲ್ಲಾಳ ತನ್ನ ವೃದ್ಧ ತಾಯಿಯ ಬಳಿಗೆ ತೆರಳುತ್ತಾನೆ.] |

* * *

## ನೋಟ – ೨

[ಬಲ್ಲಾಳ ತಾಯಿಯನ್ನು ಕರೆದು ವಿಷಯವನ್ನು ಅರುಹುತ್ತಾನೆ.]

ಬಲ್ಲಾಳ : ಅಮ್ಮಾ ನೋಡಿ ನಿಮ್ಮ ಸೊಸೆಯ ಸೆಡವು! ಕೆಟ್ಟ ಹಟದಿಂದ ಒಳಕೋಣೆಯಲ್ಲಿ ಬರಿನೆಲದಲ್ಲಿ ಮಲಗಿಬಿಟ್ಟಿದ್ದಾಳೆ! ಎಷ್ಟು ಕರೆದರೂ ಮಾತನಾಡುವುದೂ ಇಲ್ಲ; ಏಳುವುದೂ ಇಲ್ಲ!

ತಾಯಿ : ಏನು ಜಗಳಾಡಿಕೊಂಡಿರೇನೊ? ಅವಳ ಮನಸ್ಸಿಗೆ ಬೇಸರ ಮಾಡಿದೆಯ?

ಬಲ್ಲಾಳ : ಹಾಗೇನೂ ಇಲ್ಲಮ್ಮ ಅಪ್ರೂಪಕ್ಕೆ ಚೆನ್ನೆ ಆಡುತ್ತ ಇದ್ದೆವು. ಆಟದ ನಡುವೆ ತಮಾಷೆಗೆ ಅಂತ ಹರಳು ತಪ್ಪಿಸಿ ಇಟ್ಟುಬಿಟ್ಟೆ, ಅದನ್ನೇ ದೊಡ್ಡ ಹಗರಣ ಮಾಡಿ ಚೆನ್ನೆಮಣೆಯನ್ನೆ ಬಿಸಾಡಿಬಿಟ್ಟಳು! ಎಷ್ಟು ಸಮಾಧಾನಪಡಿಸಿದರೂ ಕೇಳಲಿಲ್ಲ. ನೀವೊಮ್ಮೆ ಅವಳಿಗೆ ಸಮಾಧಾನ ಹೇಳಿ.

ತಾಯಿ : ಅಷ್ಟೆಯೋ? ಏನೋ ಒಮ್ಮೆ ಸಿಟ್ಟುಮಾಡಿರಬಹುದು. ಅದೆಷ್ಟು ಹೊತ್ತು ಇರುತ್ತದೆ? ನಾನು ಒಂದು ಮಾತು ಹೇಳುತ್ತೇನೆ.

[ಮಾಣಿಗನ ಬಳಿಗೆ ತೆರಳುತ್ತಾಳೆ.]

* * *

## ನೋಟ - ೩

[ಬಲ್ಲಾಳನ ತಾಯಿ ಮಾಣಿಗನ ಬಳಿಗೆ ಬಂದು, ಮೈಮುಟ್ಟಿ)

ಮುದುಕಿ : ಮಾಣಿಗ, ಮಾಣಿಗ! ಏಳು ಮಗು! ಇದೆಂಥಾ ಕೋಪ ನಿನ್ನದು! ಇಷ್ಟಕ್ಕೂ ನಿನ್ನ ಗಂಡನೇನು ದೊಣ್ಣೆಯಿಂದ ಬಡಿದನೆ? ಪ್ರೀತಿಯಿಂದ ಒಂದು ಪೆಟ್ಟು ಕೊಟ್ಟಿರಬಹುದು! ಅದನ್ನೆಲ್ಲ ದೊಡ್ಡದು ಮಾಡುವುದೆ? ಏಳು, ಏಳು!

ಮಾಣಿಗ : ಅತ್ತೆ, ನಿಮಗೆ ಈ ನ್ಯಾಯ ಬೇಡ! ನೀವು ಹೋಗಿ!

ಮುದುಕಿ : ಏನೇ ಮಾಣಿಗ, ನನ್ನ ಗಂಡ ನನಗೆ ಎಷ್ಟು ಏಟು ಕೊಟ್ಟಿದ್ದರು ಗೊತ್ತೆ? ಒಮ್ಮೆ ಹೊಡೆದುದರಲ್ಲಿ ಅವರ ಮುಂಗೈ ಸರಪಳಿ ಕಳಚಿತ್ತು! ಅಂಥಾ ಪೆಟ್ಟು, ಏಳು, ಏಳು! ಗಂಡನಿಗೆ ಬಡಿಸು, ನೀನೂ ಉಣ್ಣು.

ಮಾಣಿಗ : ಅತ್ತೆ, ಒಳ್ಳೆ ಮಾತಿನಲ್ಲಿ ಸುಮ್ಮಗೆ ಹೋಗಿ! ಈ ಮನೆಯಲ್ಲಿ ನಾನು ಉಣ್ಣಲಾರೆ!

ಮುದುಕಿ : ಅಯ್ಯೋ, ಇದು ದೊಡ್ಡ ಕಷ್ಟವಾಯ್ತಲ್ಲ! ಗಂಡ ಹೆಂಡಿರ ನಡುವೆ ಎಷ್ಟೋ ವಿಷಯ ಬರುತ್ತದೆ, ಹೋಗುತ್ತದೆ! ಅದಕ್ಕೆಲ್ಲಾ ಇಷ್ಟು ರಂಪ ಮಾಡುತ್ತಾರೆಯೆ? ಸಾಕು, ಸಾಕು! ಏಳು, ನನಗೂ ಹಸಿವಾಗುತ್ತದೆ!

ಮಾಣಿಗ : ನೀವು ಬಡಿಸಿಕೊಂಡು ಊಟಮಾಡಿ. ನಿಮ್ಮ ಮಗನಿಗೂ ಬಡಿಸಿ! ನನಗೆ ತೊಂದರೆ ಕೊಡಬೇಡಿ.

ಮುದುಕಿ : ಚಿಕ್ಕವರು ದೊಡ್ಡವರ ಮಾತು ಕೇಳಬೇಕಮ್ಮ. ಒಂದು ಚಿಕ್ಕ ತಮಾಷೆಯ ವರ್ತನೆಯನ್ನು ಇಷ್ಟಕ್ಕೆ ಬೆಳೆಸಿದರೆ ಸಂಸಾರ ನಡೆಯುವುದು ಹೇಗೆ?

ಮಾಣಿಗ : ತಮಾಷೆ ನನಗೂ ಅರ್ಥವಾಗುತ್ತದೆ ಅತ್ತೆ! ಆದರೆ ಇದು ತಮಾಷೆಯಲ್ಲ, ಮೋಸ! ಸಂಸಾರದಲ್ಲಿ ವಿಶ್ವಾಸ ಮುಖ್ಯ! ವಿಶ್ವಾಸದ್ರೋಹವನ್ನು ಸಹಿಸುವುದು ಹೇಗೆ?

ಮುದುಕಿ : ಆಗಲಿ ಮಾಣಿಗ, ಅವನದು ತಪ್ಪೇ ಎಂದಿಟ್ಟುಕೊಳ್ಳೋಣ, ಒಂದು ಸಲಕ್ಕೆ ಕ್ಷಮೆ ಇಲ್ಲವೆ?

ಮಾಣಿಗ : ಈ ನಾಟಕ ಎಲ್ಲ ಬೇಡ ಅತ್ತೆ? ನೀವು ನಿಮ್ಮ ಪಾಡಿಗೆ ಹೋಗಿ. ನನ್ನನ್ನು ನನ್ನ ಪಾಡಿಗೆ ಬಿಡಿ! ಸುಮ್ಮನೆ ಮಾತು ಯಾಕೆ?

ಮುದುಕಿ : [ನಿರಾಶೆಯಿಂದ] ಏನೋಪ್ಪ, ಗಂಡ ಹೆಂಡಿರ ಜಗಳ! ನೀವು ನೀವೇ ಸರಿಪಡಿಸಿಕೊಳ್ಳಬೇಕಷ್ಟೆ! ನನಗ್ಯಾಕೆ? [ಆಚೆಗೆ ಸರಿಯುತ್ತಾಳೆ]

* * *

**ನೋಟ - ೪**

[ಬಲ್ಲಾಳ ಮತ್ತೆ ಹೆಂಡತಿಯ ಬಳಿಗೆ ಬರುತ್ತಾನೆ. ಅವಳ ಕೈಹಿಡಿದು]

ಬಲ್ಲಾಳ : ಮಾಣಿಗ, ಏಳು ಕೋಪ ಸಾಕು!

ಮಾಣಿಗ : [ಕೈ ಕೊಡಹಿ] ನನ್ನನ್ನು ಮುಟ್ಟಬೇಡಿ!

ಬಲ್ಲಾಳ : ಮಾಣಿಗ, ಇದು ಚಂದವಲ್ಲ! ಏಳು ಉಣ್ಣು.

ಮಾಣಿಗ : ನಾನು ಉಣ್ಣುವುದೂ ಇಲ್ಲ. ಈ ಬೀಡಿನಲ್ಲಿ ಇರುವುದೂ ಇಲ್ಲ.

ಬಲ್ಲಾಳ : ಹಾಗೆಲ್ಲ ಹೇಳಬೇಡ ಮಾಣಿಗ.

ಮಾಣಿಗ : ನನಗೆ ಒಂದೇ ಮಾತು! ನಾನೀ ಬೀಡಿನಲ್ಲಿ ಇರುವುದಿಲ್ಲ. ನನ್ನನ್ನು ನನ್ನ ತವರಿಗೆ ಕಳುಹಿಸಿಬಿಡಿ. ಹಂದರಕ್ಕೆ ಭಾರವಾದರೆ ಬಳಲಿಗೆ ಭಾರವಾಗದು!

ಬಲ್ಲಾಳ : ಹೆಣ್ಣುಗಳಿಗೆ ಇಷ್ಟು ಹಟ ಇರಬಾರದು ಮಾಣಿಗ!

ಮಾಣಿಗ : ಮತ್ತೆ ಗಂಡಸರಿಗೆ ತಾವೆ ಗೆಲ್ಲಬೇಕೆಂಬ ಹಟ ಯಾಕೆ? ನನಗೆ ಸಮಾಧಾನ ಹೇಳಲು ಬರಬೇಡಿ. ನನ್ನನ್ನು ತವರಿಗೆ ಕಳುಹಿಸಿಕೊಡಿ.

ಬಲ್ಲಾಳ : ಆಗಲಿ, ಹೋಗುವುದಿದ್ದರೆ ನಾಳೆ ಹೋಗಬಹುದು. ಈಗ ಎದ್ದು ಊಟಕ್ಕೆ ಬಡಿಸು!

ಮಾಣಿಗ : ನನಗೆ ಒಂದೇ ಮಾತೆಂದು ಹೇಳಿದೆನಲ್ಲ? ನಾನು ಉಣ್ಣುವುದೂ ಇಲ್ಲ.

|  |  |  |
|---|---|---|
|  |  | ಬಡಿಸುವುದೂ ಇಲ್ಲ. ಈ ಬೀಡಿನಲ್ಲಿ ಇರುವುದೂ ಇಲ್ಲ. ಹೋಗಲಿ ನನಗೆ ದಂಡಿಗೆಯ ವ್ಯವಸ್ಥೆ ಮಾಡಿ. |
| ಬಲ್ಲಾಳ | : | ಹಾಗಾದರೆ ನಿನ್ನ ಹಟ ನೀನು ಬಿಡುವುದಿಲ್ಲ? ಆಗಲಿ ಹೋಗು, ತೊಲಗು! [ಬಿರ್‍ರನೆ ಹೋಗಿ ಪಲ್ಲಕಿಯಲ್ಲಿ ಕುಳಿತುಕೊಳ್ಳುತ್ತಾಳೆ. ಹೊರಡಲಿಕ್ಕಾಗುವಾಗ ಬಲ್ಲಾಳ ಮನಸ್ಸು ತಡೆಯದೆ ಪಲ್ಲಕಿಯ ಬಳಿಗೆ ಹೋಗುತ್ತಾನೆ.] ಕೊನೆಗೂ ನಿನ್ನ ಹಟಸಾಧನೆ ಮಾಡಿದೆ. ಆದರೆ ಈ ಸೋಮವಾರ ಹೋದವಳು ಮುಂದಿನ ಸೋಮವಾರದೊಳಗೆ ಬಂದುಬಿಡು ಮಾಣಿಗ ನಿನಗಾಗಿ ಕಾಯುತ್ತಿರುತ್ತೇನೆ. |

***

**ನೋಟ - ೫**

|  |  |  |
|---|---|---|
|  |  | [ಮಾಣಿಗನ ಮಾವ ಮಾಪು ಪೆರ್ಗಡೆಯ ಬೀಡು. 'ಬರಕಳ'ದಲ್ಲಿ ನಾಲ್ಕಾರು ಹೆಂಗುಸರು ಭತ್ತ ಕುಟ್ಟುತ್ತಿದ್ದಾರೆ. ಪೆರ್ಗಡೆ ಅಂಗಳದಲ್ಲಿ ನಿಂತು ಕೆಲಸದವರಲ್ಲಿ ಮಾತನಾಡುತ್ತಿದ್ದಾನೆ. ದೂರದಲ್ಲಿ ಪಲ್ಲಕಿ ಬರುವುದು ಕಾಣಿಸುತ್ತದೆ] |
| ಪೆರ್ಗಡೆ | : | ಯಾರೋ ಅದು ಈ ಕಡೆ ಬರುವುದು? [ಕೆಲಸದವನೊಬ್ಬ ಅತ್ತ ಓಡಿ ಯಾರೆಂದು ತಿಳಿದು ಬರುತ್ತಾನೆ.] |
| ಕೆಲಸದವ | : | ಅದು ನಮ್ಮ ಮಾಣಿಗಕ್ಕ. |
| ಪೆರ್ಗಡೆ | : | ಯಾರು, ಮಾಣಿಗ? [ಮುಖದಲ್ಲಿ ಆಶ್ಚರ್ಯ] [ದಂಡಿಗೆ ಸಮೀಪಕ್ಕೆ ಬರುತ್ತದೆ. ಮಾಣಿಗ ಅದರಿಂದ ಇಳಿದು ಬಿಕ್ಕುತ್ತಾ ಮಾವನ ಬಳಿಗೆ ಬರುತ್ತಾಳೆ] ಏನಾಯ್ತು ಮಗಳೆ? ಒಬ್ಬಳೇ ಯಾಕೆ ಬಂದುಬಿಟ್ಟೆ? (ಮಾಣಿಗ ಬಿಕ್ಕಿ ಬಿಕ್ಕಿ ಅಳುತ್ತಾಳೆ. ಅವಳನ್ನು ಸಂತೈಸುತ್ತ) ಇರಲಿ, ವಿಚಾರ ಮತ್ತೆ ಕೇಳೋಣ. ನೀನು ಒಳಗೆ ಹೋಗಮ್ಮ. [ಮಾಣಿಗ ಬಾವಿಕಟ್ಟೆಯಲ್ಲಿ ಕೈಕಾಲು ತೊಳೆದು ಒಳಗೆ ಹೋಗುತ್ತಾಳೆ.] |

***

### ನೋಟ - ೬

[ಪೆರ್ಗಡೆ ಸೊಸೆಯೊಡನೆ ನಡೆದ ವಿಚಾರ ಕೇಳಿದ್ದಾನೆ; ಆಕೆ ತಿಳಿಸಿದ್ದಾಳೆ.]

ಪೆರ್ಗಡೆ : ನೋಡಮ್ಮ, ಇದು ಗಂಡ ಹೆಂಡಿರ ನ್ಯಾಯ. ಇದನ್ನು ದೊಡ್ಡದು ಮಾಡಬಾರದು! ಒಂದು ಸಿಟ್ಟಿಗೆ ಬಾವಿಗೆ ಹಾರಿದರೆ ಒಂಬತ್ತು ಸಿಟ್ಟು ಬಂದರೂ ಮೇಲೆ ಬರಲಿಕ್ಕಾಗುವುದಿಲ್ಲ.

ಮಾಣಿಗ : ಅದು ಸರಿ ಮಾವಯ್ಯ. ಆದರೆ ನಮಗೂ ಅಭಿಮಾನ ಎಂಬುದು ಉಂಟಲ್ಲಾ.

ಪೆರ್ಗಡೆ : ಅದು ಸರಿಯಮ್ಮ, ಆದರೆ ಅಭಿಮಾನ ಬಾಳುವೆಗೆ ಮುಳುವಾಗಬಾರದಲ್ಲ? ಆಗಲಿ, ಆದದ್ದು ಆಗಿಹೋಯಿತು. ನಾಲ್ಕು ದಿನ ಇಲ್ಲಿದ್ದು ಮತ್ತೆ ಗಂಡನ ಬೀಡಿಗೆ ಹೋಗುವೆಯಂತೆ!

ಮಾಣಿಗ : ಆ ಮಾತು ಆಡಬೇಡಿ ಮಾವಯ್ಯ.

ಪೆರ್ಗಡೆ : ಇರಲಿಬಿಡು; ಈಗ ಸುಮ್ಮನಿರು! [ತನ್ನ ಕೆಲಸದತ್ತ ಗಮನ ನೀಡುತ್ತಾನೆ.]

***

### ನೋಟ - ೭

[ಪರ್ಮಾಲೆ ಬಲ್ಲಾಳ ಚಿಂತಾಕ್ರಾಂತನಾಗಿದ್ದಾನೆ. ಎಂಟು ದಿನ ಕಳೆದರೂ ಮಾಣಿಗ ಬಾರದೆ ಇದ್ದುದರಿಂದ ನಿರಾಶೆಯಿಂದ ಇಳಿದು ಹೋಗಿದ್ದಾನೆ. ಒಂಬತ್ತನೆಯ ದಿನ ಬೆಳಗ್ಗೆ ಬೀಡಿನ ಜುಮಾದಿ ದೈವದ ಪೀಠದಲ್ಲಿ ಒಂದು ತಂಬಿಗೆಯಲ್ಲಿ ನೀರು ಮಡಗಿ, ಕೈಮುಗಿದು  ಪ್ರಾರ್ಥಿಸುತ್ತಾನೆ.]

ಬಲ್ಲಾಳ : ಸ್ವಾಮೀ ದೈವವೆ, ನನ್ನ ಹೆಂಡತಿ ಮಾಣಿಗನ ಮನಸ್ಸನ್ನು ತಿರುಗಿಸಿ, ಅವಳು ನಮ್ಮ ಬೀಡಿಗೆ ಮತ್ತೆ ಬರುವಂತಾದರೆ, ಅವಳ ಮೈಯ್ಯನ್ನು ಮುಟ್ಟುವುದಕ್ಕೆ ಮೊದಲು ನಿನಗೆ ನೇಮ ಒಪ್ಪಿಸುತ್ತೇನೆ. ನಮ್ಮ ಸಂಸಾರದ ಒಡಕನ್ನು ಕಳೆದು, ನಮ್ಮನ್ನು ಒಂದುಗೂಡಿಸುವ ಆರಭಾರ ನಿನಗೆ ಸೇರಿದ್ದು.

[ಉದ್ದಂಡ ನಮಸ್ಕಾರ ಮಾಡುತ್ತಾನೆ.]

* * *

### ನೋಟ - ೮

[ರಾತ್ರಿ ವೇಳೆ ಮಾಣಿಗ ಮಾವನ ಬೀಡಿನಲ್ಲಿ ಮಲಗಿ ನಿದ್ರಿಸುತ್ತಿದ್ದವಳು ಧಿಕ್ಕನೆ ಎದ್ದು ಕುಳಿತುಕೊಳ್ಳುತ್ತಾಳೆ. ಸುತ್ತಲೂ ನೋಡುತ್ತಾಳೆ, ಯಾರೂ ಇಲ್ಲ! ಎಲ್ಲೆಲ್ಲೂ ನಿಶ್ಶಬ್ದ. ಎಲ್ಲೋ ದೂರದಿಂದ ಗಗ್ಗರದ ದನಿ ಕೇಳಿದ ಹಾಗೆ ಭಾಸವಾಗುತ್ತದೆ. ಮಾಣಿಗ

ಮೆಲ್ಲನೆ ಎದ್ದು, ಮಾವ ಮಲಗಿದ್ದಲ್ಲಿಗೆ ಬರುತ್ತಾಳೆ.]

ಮಾಣಿಗ : ಮಾವಯ್ಯ, ಮಾವಯ್ಯ!

ಪೆರ್ಗಡೆ : [ಗಡಬಡಿಸಿ ಎದ್ದು] ಯಾರದು?

ಮಾಣಿಗ : ನಾನು ಮಾವಯ್ಯ!

ಪೆರ್ಗಡೆ : ಯಾರು, ಮಾಣಿಗ?

ಮಾಣಿಗ : ಹೌದು ಮಾವಯ್ಯ

ಪೆರ್ಗಡೆ : ಏನಮ್ಮ, ಯಾಕೆ ಕರೆದೆ? ಬೆಳಗಾದ ಹಾಗಿಲ್ಲವಲ್ಲ?

ಮಾಣಿಗ : ಬೆಳಗಾಗಲು ಇನ್ನೂ ಹೊತ್ತಿದೆ ಮಾವಯ್ಯ. ರಾತ್ರಿಯಿಡೀ ನಾನು ಎವೆ ಮುಚ್ಚಲಿಲ್ಲ. ನನಗೆ ಈಗಲೇ ಹೋಗಬೇಕು! ದಂಡಿಗೆ ಸಿದ್ಧತೆ ಮಾಡಿಸಿ ಮಾವಯ್ಯ.

ಪೆರ್ಗಡೆ : ಇದೇನಿದು? ಇಷ್ಟು ದಿನ ಹೋಗುವುದೇ ಇಲ್ಲ ಎಂದು ಹಟತೊಟ್ಟವಳು ಈಗ ಇದ್ದಕ್ಕಿದ್ದ ಹಾಗೆ ಗಂಡನ ಮನೆಗೆ ಹೋಗುತ್ತೇನೆ ಎಂದು ಹೇಳುತ್ತೀಯಲ್ಲ? ಆಗಲಿ, ಸಂತೋಷ! ನೀನು ಮನಸ್ಸು ಬದಲಾಯಿಸಿದ್ದು ಒಳ್ಳೆಯದೇ ಆಯ್ತು! ಆದರೆ, ಯಾವುದಕ್ಕೂ ಬೆಳಗಾಗಲಿ, ಹೋಗೋಣವಂತೆ!

ಮಾಣಿಗ : ಇಲ್ಲ ಮಾವಯ್ಯ, ಈಗಲೇ ಹೋಗಬೇಕು! ನನಗೆ ಏನೇನೋ ಕನಸು! ಅವರನ್ನು ಒಡನೆಯೇ ನೋಡಬೇಕೆನಿಸಿದೆ. ಮನಸ್ಸಿನೊಳಗೆ ಏನೇನೋ ತಳಮಳ. ಅವರನ್ನು ಬಿಟ್ಟು ನಾನಿರಲಾರೆ. ಅವರು ಹೇಗಿದ್ದಾರೋ ಏನೊ!

ಪೆರ್ಗಡೆ : ಅಯ್ಯೋ ಕತೆಯೆ! ಬೆಳಗಾಗಲಿ ಮಗಳೆ. ಬೆಳಗ್ಗೆ ಅದಷ್ಟು ಬೇಗ ಹೊರಡಬಹುದು.

ಮಾಣಿಗ : ಇಲ್ಲ, ಇಲ್ಲ. ದೈವವೇ ಕನಸು ಕಟ್ಟಿದಂತಿದೆ ಈಗಲೇ ಹೊರಡಬೇಕು. ನಾನು. ತಡಮಾಡುವಂತಿಲ್ಲ.

ಪೆರ್ಗಡೆ : ನಿನ್ನ ಹಟವೇ ನಿನಗೆ! ಆಗಲಿ, ಮತ್ತೇನು ಮಾಡುವುದು? ಈಗಲೇ ಹೊರಡುವಿಯಂತೆ. ನಾನು ಪಲ್ಲಕಿಯ ಏರ್ಪಾಡು ಮಾಡಿಸುತ್ತೇನೆ. ನೀನು ಹೊರಡುವ ಸಿದ್ಧತೆ ಮಾಡು.

ಮಾಣಿಗ : ಆಗಲಿ, ಮಾವಯ್ಯ [ಸಂಭ್ರಮಿಸುತ್ತಾಳೆ.]

***

## ನೋಟ - ೯

[ಕತ್ತಲೆ ಕಳೆದು ಬೆಳಕು ಹರಿದಿದೆ. ಪರ್ಮಾಲೆ ಬಲ್ಲಾಳನು ತನ್ನ ಬೀಡಿನ ಅಂಗಳದಲ್ಲಿ ಕಂಬದಂತೆ ನಿಂತಿದ್ದಾನೆ; ಯೋಚನಾಮಗ್ನನಾಗಿದ್ದಾನೆ. ದೂರದಲ್ಲಿ ದಂಡಿಗೆ ಬರುವುದನ್ನು ಕಂಡು ಅವನ ಕಣ್ಣು ಹೊಳೆಯುತ್ತದೆ; ಮುಖ ಗೆಲವಾಗುತ್ತದೆ.]

ಬಲ್ಲಾಳ : ನನ್ನ ಮಾಣಿಗ, ಹೌದು ನನ್ನ ಮಾಣಿಗ! ಅಂತೂ ಕೊನೆಗೂ ಬಂದುಬಿಟ್ಟಳಲ್ಲ.

[ಮನಸ್ಸಿನಲ್ಲಿ ಸಂತಸ ತುಳುಕಿ ಪಲ್ಲಕಿಯ ಬಳಿಗೆ ಓಡುತ್ತಾನೆ. ಪಲ್ಲಕಿಯವರು ಅದನ್ನು ಇಳಿಸುತ್ತಾರೆ]

ಬಲ್ಲಾಳ : [ಸಂಭ್ರಮಾತಿರೇಕದಿಂದ] ಮಾಣಿಗ, ನನ್ನ ಮಾಣಿಗ ಬಂದೆಯ! ಬಂದುಬಿಟ್ಟೆಯ? ಬಾ, ಬಾ! [ಎಂದು ಕೈಹಿಡಿದು, ಪ್ರೀತಿಯಿಂದ ಪಲ್ಲಕಿಯಿಂದ ಕೆಳಗಿಳಿಸುತ್ತಾನೆ.

ಮಾಣಿಗ : (ಪಶ್ಚಾತ್ತಾಪಪೂರ್ವಕ] ಬೇಸರವಾಯ್ತೆ? ನನ್ನದು ತಪ್ಪಾಯ್ತು!

ಬಲ್ಲಾಳ : ತಪ್ಪು ಒಪ್ಪೆಲ್ಲ ಆ ಮೇಲೆ! ಈಗ ಒಳಗೆ ಬಾ!

[ಮಾಣಿಗ ಒಳಗೆ ಕಾಲಿಡಬೇಕೆನ್ನುವಷ್ಟರಲ್ಲಿ ಹೊಸ್ತಿಲು ಎಡವಿ ಬೀಳುತ್ತಾಳೆ. ಬಿದ್ದವಳು ಏಳುವುದಿಲ್ಲ.]

ಏನು, ಏನಾಯ್ತು ಮಾಣಿಗ? ಏಳು, ಏಳು!

[ಮಾಣಿಗನ ಮುಖದಿಂದ ಯಾವ ಉದ್ಗಾರವೂ ಹೊರಡುವುದಿಲ್ಲ. ಬಾಯಿಯಿಂದ ನೊರೆ ಸೂಸುತ್ತದೆ. ಬಲ್ಲಾಳ ಅವಳ ಮೈಯನ್ನು ಅಲುಗಾಡಿಸಿದನು)

ಮಾಣಿಗ, ಮಾಣಿಗ, ಮಾತಾಡು ಮಾಣಿಗ! ಸಿಟ್ಟು ಮಾಡಬೇಡ. ಏಳು ಮಾಣಿಗ.

[ಮಾಣಿಗನ ದೇಹದಲ್ಲಿ ಸ್ಪಂದನವಿಲ್ಲ. ಅವಳ ಜೀವ ಹಾರಿದೆ ಎಂಬ ಅರಿವು ಬಲ್ಲಾಳನಿಗಾಗುತ್ತದೆ. ಹಣೆ ಹಣೆ ಬಡಿದುಕೊಂಡು ರೋದಿಸುತ್ತಾನೆ]

ಅಯ್ಯೋ ಮಾಣಿಗ, ಈ ಪಾಪಿಯನ್ನು ಬಿಟ್ಟು ಹೋಗಿಬಿಟ್ಟೆಯ? ಈ ಬೀಡಿನಲ್ಲಿ ಇನ್ನು ಬಾಳಲಾರೆ ಎಂದು ನೀನಾಡಿದ ಮಾತು ಸತ್ಯವಾಯ್ತೆ? ಅಯ್ಯಯ್ಯೋ ನಾನೆಂಥ ಹುಚ್ಚ? ದೈವಕ್ಕೆ ಹೇಳಿಕೊಂಡ ಹರಕೆಯನ್ನು ಮರೆತುಬಿಟ್ಟೆ!

ದೈವಕ್ಕೆ ನೇಮಕೊಡುವುದಕ್ಕೆ ಮೊದಲು ನಿನ್ನನ್ನು ಮುಟ್ಟಿಬಿಟ್ಟೆ! ನಿನ್ನನ್ನು ನಾನೇ ಕಯ್ಯಾರೆ ಕೊಂದುಬಿಟ್ಟೆನಲ್ಲ ಮಾಣಿಗಾ!....

ಅಯ್ಯೋ, ನನ್ನಿಂದ ತಪ್ಪಾಯ್ತು ನಿಜ... ಆದರೆ ತಾಯಿಗೆ ಸಮಾನವಾದ ದೈವಕ್ಕಾದರೂ ಒಂದಿಷ್ಟು ಕರುಣೆ ಇರಬಾರದಿತ್ತೇ? ನನಗಿನ್ನೇನು ಗತಿ ದೈವವೇ!

[ಮಮ್ಮಲ ಮರುಗುತ್ತ ಹೊಸ್ತಿಲಿಗೆ ತಲೆ ಚಚ್ಚಿಕೊಳ್ಳುತ್ತಾನೆ.]

## ಲೇಖಕರ ಪರಿಚಯ



ಅಮೃತ ಸೋಮೇಶ್ವರರು ೨೭.೦೯.೧೯೩೫ ರಂದು ಮಂಗಳೂರು ಸಮೀಪದ ಕೋಟೆಕಾರು ಗ್ರಾಮದ ಅಡ್ಕ ಎಂಬಲ್ಲಿ ಜನಿಸಿದರು. ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ನಂತರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ ಪದವಿಯನ್ನು ಪಡೆದರು. ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ದುಡಿದು ನಿವೃತ್ತರಾದರು. ಶ್ರೀಯುತರು ನೂರಾರು ಪಾಡ್ದನಗಳನ್ನು ಸಂಗ್ರಹಿಸಿದ್ದಲ್ಲದೆ, ಭೂತಾರಾಧನೆ ಮತ್ತು ತುಳುನಾಡಿನ ವಿವಿಧ ಆಚರಣೆಗಳ ಕುರಿತು ಸಂಶೋಧನೆಯನ್ನೂ ಮಾಡಿದ್ದಾರೆ. 'ಯಕ್ಷಗಾನ ಕೃತಿ ಸಂಪುಟ' ಎಂಬ ಪ್ರಸಂಗ ಸಂಪುಟವನ್ನು ಪ್ರಕಟಿಸಿದ್ದಾರೆ. ಹಲವಾರು ತುಳು ನಾಟಕಗಳನ್ನೂ, ಸಣ್ಣ ಕಥೆಗಳನ್ನೂ, ಕಾದಂಬರಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಪ್ರಶಸ್ತಿ, ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳು ಲಭಿಸಿವೆ. ಮಂಗಳೂರು ವಿಶ್ವವಿದ್ಯಾಲಯವು ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಇವರು ೦೬.೦೧.೨೦೨೪ ರಂದು ನಿಧನ ಹೊಂದಿದರು.

'ಚೆನ್ನೆಮಣೆಯ ಹಿಂದಿನ ವಿಧಿ' ಎಂಬ ನಾಟಕವನ್ನು ಇವರ 'ಕಲ್ಲೋಜ ಬೀರು ಕಲ್ಕುಡ ಮತ್ತು ಇತರ ನಾಟಕಗಳು' ಎಂಬ ಕೃತಿಯಿಂದ ಆರಿಸಲಾಗಿದೆ.

## ವಿಶದೀಕರಣ

**ಪೊರಿ** - ಚೆನ್ನೆಮಣೆ ಆಟದಲ್ಲಿ ಚೆನ್ನೆಮಣೆಯ ಗುಳಿಗಳಿಗೆ ಬೆಂಕಿ ಬೀಳುವುದು ಎಂಬ ಕಲ್ಪನೆ. ಇದು ಆಟದಲ್ಲಿ ಉಂಟಾಗುವ ಹೀನಾಯವಾದ ಸೋಲು.

## ಉತ್ತರಿಸಿರಿ

**ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಬಲ್ಲಾಳನಿಗೆ ಚೆನ್ನೆಮಣೆ ಆಡಬೇಕೆಂದು ಅನಿಸಲು ಕಾರಣವೇನು?
2. ಬಲ್ಲಾಳನು 'ಚೆನ್ನೆಮಣೆ ತಾ' ಎಂದಾಗ ಮಾಣಿಗ ಏನು ಮಾಡಿದಳು?
3. ಚೆನ್ನೆಮಣೆಯನ್ನು ಬಲ್ಲಾಳನು ಯಾವಾಗ ತಿರುಗಿಸಿಟ್ಟನು?
4. ಎಂಟು ದಿನ ಕಳೆದರೂ ಮಾಣಿಗ ಬಾರದೆ ಇದ್ದಾಗ ನಿರಾಶೆಗೊಂಡ ಬಲ್ಲಾಳನು ಜುಮಾದಿ ದೈವದ ಪೀಠಕ್ಕೆ ಕೈಮುಗಿದು ಏನೆಂದು ಪ್ರಾರ್ಥಿಸಿದನು?
5. ಮಾಣಿಗನ ಜೀವ ಹಾರಿದೆ ಎಂಬ ಅರಿವು ಬಲ್ಲಾಳನಿಗಾದಾಗ ಅವನು ಹಣೆಹಣೆ ಬಡಿದುಕೊಂಡು ಏನೆಂದು ರೋದಿಸಿದನು?

## ಪಾತ್ರಚಿತ್ರಣ ಮಾಡಿರಿ

'ಚೆನ್ನೆಮಣೆ' ಪಾಠಭಾಗದಲ್ಲಿ ಬಂದಿರುವ ಮಾಣಿಗನ ಪಾತ್ರ ಚಿತ್ರಣ ಮಾಡಿರಿ.

## ಟಿಪ್ಪಣಿ ಬರೆಯಿರಿ

ಜನಪದ ಆಟಗಳ ಪಟ್ಟಿಮಾಡಿರಿ. ಅದರಲ್ಲಿ ನಿಮಗಿಷ್ಟವಾದ ಒಂದು ಆಟದ ಕುರಿತು ಟಿಪ್ಪಣಿ ಬರೆಯಿರಿ.

## ರೂಪಾಂತರಿಸಿ ಬರೆಯಿರಿ

'ಚೆನ್ನೆಮಣೆ' ನಾಟಕವನ್ನು ಸಂಕ್ಷಿಪ್ತವಾಗಿ ಕಥಾರೂಪದಲ್ಲಿ ಬರೆಯಿರಿ.

## ಅಭಿನಯಿಸಿರಿ

ಪಾತ್ರಗಳನ್ನು ಹಂಚಿಕೊಂಡು 'ಚೆನ್ನೆಮಣೆ' ನಾಟಕವನ್ನು ತರಗತಿಯಲ್ಲಿ ಅಭಿನಯಿಸಿರಿ.

## ವಿಭಕ್ತಿ ಪ್ರತ್ಯಯ ತಿಳಿಯಿರಿ

'ಪ್ರತ್ಯಯ' ಎಂದರೆ ನಿರ್ದಿಷ್ಟ ಅರ್ಥವನ್ನು ಕೊಡುವುದಕ್ಕಾಗಿ ಪದದ ಮುಂದೆ ಸೇರುವ ಭಾಷೆಯ ಒಂದು ಘಟಕ.

ನಾಮ ಪ್ರಕೃತಿಗಳಿಗೆ ಸೇರುವ ಕೆಲವು ಪ್ರತ್ಯಯಗಳನ್ನು ವಿಭಕ್ತಿ ಪ್ರತ್ಯಯಗಳು ಎನ್ನುತ್ತಾರೆ.

ವಾಕ್ಯಗಳಲ್ಲಿ ಬಳಕೆಯಾಗುವ ಪದಗಳಿಗೆ ನಿರ್ದಿಷ್ಟ ವಿಭಕ್ತಿ ಪ್ರತ್ಯಯಗಳು ಸೇರಿದರೆ ಮಾತ್ರವೇ ಸರಿಯಾದ ಅರ್ಥ ಕೊಡುವ ಪೂರ್ಣವಾಕ್ಯವಾಗುವುದು. ಈ ವಿಭಕ್ತಿ ಪ್ರತ್ಯಯಗಳಲ್ಲಿ ಏಳು ವಿಧ.

| ವಿಭಕ್ತಿಯ ಹೆಸರು | ವಿಭಕ್ತಿ ಪ್ರತ್ಯಯ | ಉದಾಹರಣೆ |
|---|---|---|
| ಪ್ರಥಮಾ ವಿಭಕ್ತಿ | ಉ | ಚೆನ್ನಿಮಣೆಯು |
| ದ್ವಿತೀಯಾ ವಿಭಕ್ತಿ | ಅನ್ನು | ಚೆನ್ನಿಮಣೆಯನ್ನು |
| ತೃತೀಯಾ ವಿಭಕ್ತಿ | ಇಂದ | ಚೆನ್ನಿಮಣೆಯಿಂದ |
| ಚತುರ್ಥೀ ವಿಭಕ್ತಿ | ಗೆ, ಕೆ, ಇ, ಗೆ, ಕ್ಕೆ | ಚೆನ್ನಿಮಣೆಗೆ |
| ಪಂಚಮೀ ವಿಭಕ್ತಿ | ಇಂದ (ದೆಸೆಯಿಂದ) | ಚೆನ್ನಿಮಣೆಯಿಂದ |
| ಷಷ್ಠೀ ವಿಭಕ್ತಿ | ಅ | ಚೆನ್ನಿಮಣೆಯ |
| ಸಪ್ತಮೀ ವಿಭಕ್ತಿ | ಅಲ್ಲಿ | ಚೆನ್ನಿಮಣೆಯಲ್ಲಿ |

# ಬೇಹಾಗ ತರಿಸಿಕೊಂಡಪೆನ್...

**- ರಾಘವಾಂಕ**

**(ಕಥಾ ಸಂದರ್ಭ:** ದೇವಲೋಕದಲ್ಲಿ ದೇವೇಂದ್ರನ ಓಲಗ ನಡೆಯುತ್ತಿತ್ತು. ಆ ಓಲಗದಲ್ಲಿ ಮಹಾಮುನಿಗಳಾದ ವಸಿಷ್ಠ ಮತ್ತು ವಿಶ್ವಾಮಿತ್ರರು ನೆರೆದಿದ್ದರು. ದೇವೇಂದ್ರನು ವಸಿಷ್ಠರಲ್ಲಿ "ಸಮಸ್ತ ಭೂಮಂಡಲವನ್ನು ಆಳುತ್ತಿರುವ ಸೂರ್ಯವಂಶದ ರಾಜರುಗಳಲ್ಲಿ ಇದುವರೆಗೆ ಸುಳ್ಳು ಹೇಳದ ರಾಜ ಯಾರು?" ಎಂದು ಪ್ರಶ್ನಿಸುತ್ತಾನೆ. ಆಗ ವಸಿಷ್ಠನು "ಸೂರ್ಯವಂಶದ ರಾಜರುಗಳಲ್ಲಿ ಇದುವರೆಗೆ ಸುಳ್ಳು ಹೇಳದ ರಾಜನೆಂದರೆ ಹರಿಶ್ಚಂದ್ರ ಚಕ್ರವರ್ತಿ ಮಾತ್ರ" ಎಂದು ಉತ್ತರಿಸುತ್ತಾನೆ. ಈ ಮಾತನ್ನು ವಿಶ್ವಾಮಿತ್ರ ಮಹರ್ಷಿ ಖಂಡಿಸುತ್ತಾನೆ. ಈ ವಿಷಯವಾಗಿ ವಸಿಷ್ಠ ವಿಶ್ವಾಮಿತ್ರರೊಳಗೆ ವಾದವಿವಾದಗಳು ನಡೆಯುತ್ತವೆ. ಕೊನೆಗೆ ವಸಿಷ್ಠನು "ಹರಿಶ್ಚಂದ್ರನು ಸುಳ್ಳು ಹೇಳಿದರೆ ತಾನು ಇದುವರೆಗೆ ತನ್ನ ತಪಸ್ಸಿನಿಂದ ಗಳಿಸಿದ ಪುಣ್ಯವನ್ನು ತೊರೆದು ಸತಿಯನ್ನು ಬಿಟ್ಟು ದಿಗಂಬರನಾಗಿ ನರಕಪಾಲದಲ್ಲಿ ಮದ್ಯವನ್ನು ಕುಡಿಯುತ್ತ ತೆಂಕು ದಿಕ್ಕಿಗೆ ಹೋಗುತ್ತೇನೆ" ಎಂದು ಘೋರ ಪ್ರತಿಜ್ಞೆಯನ್ನು ಮಾಡುತ್ತಾನೆ. ಪ್ರತಿಯಾಗಿ ವಿಶ್ವಾಮಿತ್ರನು "ಒಂದು ವೇಳೆ ಹರಿಶ್ಚಂದ್ರನು ಸತ್ಯವಂತನೆಂದು ಸಾಬೀತಾದರೆ ತಾನು ದೀರ್ಘಕಾಲದವರೆಗೆ ದೇವಲೋಕಕ್ಕೆ ಬರುವುದಿಲ್ಲ. ಅಲ್ಲದೆ ನಾನು ನನ್ನ ತಪಸ್ಸಿನಿಂದ ಗಳಿಸಿದ ಪುಣ್ಯದಲ್ಲಿ ಅರ್ಧ ಭಾಗವನ್ನು ಹರಿಶ್ಚಂದ್ರನಿಗೆ ದಾನ ಮಾಡುತ್ತೇನೆ" ಎಂದು ಪ್ರತಿಜ್ಞೆ ಮಾಡುತ್ತಾನೆ. ಹೀಗೆ ಪ್ರತಿಜ್ಞೆ ಮಾಡಿದ ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಸುಳ್ಳುಗಾರನನ್ನಾಗಿಸಲು ಉಪಾಯವನ್ನು ಯೋಚಿಸುತ್ತಿರುತ್ತಾನೆ.)

ಕೋಣನೆರಡುಂ ಹೋರೆ ಗಿಡುವಿಂಗೆ ಮಿೞ್ತೆಂಬ
ಕ್ಷೋಣಿಯಾಡುವ ಗಾದೆಯಂ ದಿಟಂ ಮಾಳ್ಪಂತೆ
ಹೂಣಿಸಿ ವಸಿಷ್ಠಂಗೆ ಕೌಶಿಕಂ ನುಡಿದ ಪ್ರತಿಜ್ಞೆಯಂ ಗೆಲುವೊಡಿನ್ನು l
ಜಾಣಿಂ ಹರಿಶ್ಚಂದ್ರರಾಯನುನ್ನತಿಯಳಿವ
ಕಾಣಬೇಕೆಂದಖಿಳ ಸಾಮರ್ಥ್ಯದ ಕಲಾ ಪ್ರ
ವೀಣನಂತಸ್ಥದೇಕಾಂತದೊಳು ಚಿಂತೆಯಿಂ ಭ್ರಾಂತಿಯೋಗದೊಳಿರ್ದನು ll೧ ll

ಧರೆಯೊಳು ಹರಿಶ್ಚಂದ್ರನಂ ಹುಸಿಕನೆಂದೆನಿಪ
ಪರಿಯಾವುದೆಂದು ಚಿಂತಿಸಲೊಂದುಪಾಯಮಂ
ಕುರಿಸೆ ಕಂಡುಬ್ಬಿ ಭುಜವೊಯ್ದು ನಿಜವೈರದಂತಸ್ಥವಱಿಯದ ಮುನಿಗಳ l
ಕರೆದು ನೀವಿಂತೀಗ ಹೋಗಿ ಭೂವರನನುಪ
ಚರಿಸಿ ಬೋಧಿಸಿ ಬಹುಸುವರ್ಣಯಾಗವನಾವ
ಪರಿಯೊಳಂ ಮಾಳ್ಪನುವನುಱ್ ಮಾಳ್ಪುದೆಂದು ಕಳುಹಿದನು ವಿಶ್ವಾಮಿತ್ರನು ll೨ll

ಕೌಶಿಕನ ಕುಟಿಲವಱಿಯದೆ ಹೋದ ಮುನಿಗಳವ
ನೀಶಂಗೆ ಮಂಗಳಾಶೀರ್ವಾದಸೇಸೆಯಂ
ಸೂಸಲೇಂ ಕಾರ್ಯ ಬಿಜಯಂಗೆಯ್ದಿರೆನೆ ಸಕಲ ವೇದ ಪೌರಾಣಾಗಮಾ l
ರಾಶಿಗಳೊಳೊಂದಧಿಕ ಧರ್ಮಮಂ ಕಂಡರುಪ
ಲೋಸುಗಂ ಬಂದೆವೆನಲಾವುದೆನೆ ಮಾಳ್ಪವಿ
ಶ್ವಾಸಮಂ ನುಡಿಯೆ ಪೇಳ್ದಪೆವದಂ ಮಾಡದೊಡೆ ನುಡಿದು ಫಲವೇನೆಂದರು ll೩II

ಮನವೊಸೆದು ಮಾಡುವಂತಾಗಿ ಗುರುವಾಸಿಷ್ಠ
ಮುನಿಯ ಪದಪಂಕೇಜದಾಣೆ ನೆಟ್ಟನೆ ಪೇಳ್ವ
ದೆನೆ ಬಹುಸುವರ್ಣಯಾಗಂ  ಯಾಗಕೋಟಾನುಕೋಟಿಗಳೊಳಧಿಕ  ಫಲವು I
ನಿನಗಲ್ಲದಿನ್ನುಳಿದವರ್ಗಾಗದೆಂದಡದ
ಱನುವಾವುದೆನೆ ನೆರೆದ ಮುನಿಗಳತಿದೋಷ ನೆ
ಟ್ಟನೆ ನಿನಗೆ ಬಾರದಂದದಿ ಬೇಡಿದನಿತು ವಸ್ತುವನೀಯಬೇಕೆಂದರು II೪II

ಆ ವಿಮಳಮುನಿಗಳ ಹಿತೋಪದೇಶವನಾಂತು
ಭೂವರಂ ಸರ್ವಮುನಿವರ್ಗಮಂ ಬರಿಸಿ ದಾ
ನಾವೇದವಿಧಿವಿಹಿತಧರ್ಮಾಗಮಾರ್ಥದಿಂ ಯಾಗಮಂ ಮಾಡಿ ಬಳಿಕ I
ಆವಾವ ಮುನಿಗಳಾವಾವ ಧನಮಂ ಬೇಡ
ಲೀವಿ ಕೊಟ್ಟುಪಚರಿಸುತಿರೆ ಬಂದ ಸುಜನ ಮೃಗ
ಧೀವರಂ ಕಪಟಪಟು ಕೌಶಿಕಂ ವಾಸಿಷ್ಠಮುನಿ ಹೋದ ಹೊತ್ತನಱಿದು II೫ II

ಇತ್ತಲಾ ಭೂಭುಜಂ ಸಕಲಮುನಿಗಳಿಗೆ ಮನ

ವೆತ್ತಿಕ್ಕಿ ನೆನೆದರ್ಥಮಂ ಕೊಡುತ್ತಿರಲಾ ಸು

ಚಿತ್ತಮನನಾಗಿ  ಸಂತೋಷದಿಂ ಹರ್ಷ ಸಂಜನಿತ ಸಂಭ್ರಮದೊಳಿರಲು |

ಅತ್ತ ವಿಶ್ವಾಮಿತ್ರಮುನಿಯಱಿಕೆಯಾಯ್ತೆಂದು

ಸುತ್ತಿದ ಪ್ರಪಂಚವೆಲ್ಲವ ಕೂಡಿಕೊಂಡು ನಲಿ

ಯುತ್ತ ನಟಿಸುತ್ತ ಹೊಡೆದಾಡಿ ಬಂದನು ಹರಿಶ್ಚಂದ್ರ ಭೂಪಾಲನೆಡೆಗೆ ll೬ll



ಹರಿದು ವಿಶ್ವಾಮಿತ್ರ ಮುನಿಗೆಱಗಿ ಚರಣಸರ

ಸಿರುಹಮಂ ತೊಳೆದು ನೆನೆದರ್ಥಮಂ ಬೆಸಸೆನಲು

ಪಿರಿಯ ಕರಿಯಂ ಮೆಟ್ಟಿ ಕವಡೆಯಂ ಮಿಡಿದೊಡೆನಿತುದ್ದಮಂ  ಪೋಪುದದಱl

ಸರಿಯೆನಿಸಿ ಸುರಿದ ಹೊಸ ಹೊನ್ನ ರಾಸಿಯನೀವು

ದರಸಯೆಂದೆನೆ ಹಸಾದಂ ಕೊಟ್ಟೆನದನೀಗ

ಲಿರದೊಯ್ವುದೆನೆ ನಿನ್ನ ಮೇಲಿರಲಿ ಬೇಹಾಗ ತರಿಸಿಕೊಂಡಪೆನೆಂದನು II೭II

## ಲೇಖಕರ ಪರಿಚಯ



ರಾಘವಾಂಕನು ನಡುಗನ್ನಡ ಕಾಲದ ಪ್ರಸಿದ್ಧ ಕವಿಗಳಲ್ಲಿ ಒಬ್ಬನಾಗಿದ್ದಾನೆ. ಈತನ ಕಾಲ ಕ್ರಿ.ಶ ಹದಿಮೂರನೇ ಶತಮಾನ. ಈತನ ವಾಸಸ್ಥಳ ಹಂಪೆ. ತಂದೆ ಮಹಾದೇವ, ತಾಯಿ ರುದ್ರಾಣಿ. ಕನ್ನಡದ ಪ್ರಸಿದ್ಧ ಕವಿ ಹರಿಹರ ಈತನ ಸೋದರ ಮಾವ ಮತ್ತು ಗುರು. ಈತ ಹಂಪೆಯ ವಿರೂಪಾಕ್ಷ ದೇವರ ಪರಮ ಭಕ್ತನಾಗಿದ್ದನು. ಷಟ್ಪದಿ ಛಂದಸ್ಸಿನಲ್ಲಿ ಮೊದಲಿಗೆ ಸಮಗ್ರ ಕಾವ್ಯ ರಚಿಸಿದ ರಾಘವಾಂಕನಿಗೆ ಉಭಯ ಕವಿ ಕಮಲರವಿ, ಕವಿ ಶರಭ ಭೇರುಂಡ ಮುಂತಾದ ಬಿರುದುಗಳಿದ್ದವು. ಹರಿಶ್ಚಂದ್ರ ಕಾವ್ಯ,ಸೋಮನಾಥ ಚಾರಿತ್ರ, ಸಿದ್ಧರಾಮ ಚಾರಿತ್ರ , ಶರಭ ಚಾರಿತ್ರ, ಹರಿಹರ ಮಹತ್ವ ಮುಂತಾದ ಕೃತಿಗಳನ್ನು ರಚಿಸಿದ್ದಾನೆ. ಈ ಕಾವ್ಯ ಭಾಗವನ್ನು ರಾಘವಾಂಕನ 'ಹರಿಶ್ಚಂದ್ರ' ಕಾವ್ಯದಿಂದ ಆರಿಸಲಾಗಿದೆ.

## ಉತ್ತರಿಸಿರಿ

**ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಕೌಶಿಕನು ಏನೆಂದು ಚಿಂತಿಸಿದನು?
2. ಹರಿಶ್ಚಂದ್ರನನ್ನು ಸುಳ್ಳುಗಾರನನ್ನಾಗಿ ಮಾಡಲು ವಿಶ್ವಾಮಿತ್ರನು ಯಾವ ಉಪಾಯವನ್ನು ಮಾಡಿದನು?
3. ಕೌಶಿಕನು ಕಳುಹಿಸಿದ ಮುನಿಗಳು ಹರಿಶ್ಚಂದ್ರನೊಡನೆ ಏನು ಹೇಳಿದರು?
4. ಬಹುಸುವರ್ಣ ಯಾಗವನ್ನು ಹೇಗೆ ಮಾಡಬೇಕೆಂದು ಮುನಿಗಳು ಹರಿಶ್ಚಂದ್ರನಿಗೆ ಸೂಚಿಸಿದರು?
5. ಬಹು ಸುವರ್ಣಯಾಗದ ಭಾಗವಾಗಿ ಹರಿಶ್ಚಂದ್ರನಲ್ಲಿ ವಿಶ್ವಾಮಿತ್ರನು ಎಷ್ಟು ಹೊನ್ನನ್ನು ಕೇಳಿದನು?

## ಪದ ವಿಂಗಡಿಸಿರಿ

ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ.

ಉದಾ:

ಹರಿಶ್ಚಂದ್ರರಾಯನುನ್ನತಿಯಳಿವ - ಹರಿಶ್ಚಂದ್ರರಾಯನ + ಉನ್ನತಿ + ಅಳಿವ

ಪ್ರವೀಣನಂತಸ್ಥದೇಕಾಂತದೊಳು - ಪ್ರವೀಣನ್ + ಅಂತಸ್ಥದ + ಏಕಾಂತದೊಳು

ಚಿಂತಿಸಲೊಂದುಪಾಯಮಂಕುರಿಸೆ

ನಿಜವೈರದಂತಸ್ಥವರಿಯದ

ಬಂದೆವೆನಲಾವುದೆನೆ

ಮಿಡಿದೊಡೆನಿತುದ್ದಮಂ

ಹೊಸಹೊನ್ನರಾಸಿಯನೀವುದರಸಯೆಂದೆನೆ

ಕೊಟ್ಟೆನದನೀಗಲಿರದೊಯ್ವುದೆನೆ

## ಆಶಯ ಬರೆಯಿರಿ

'ಬೇಹಾಗ ತರಿಸಿಕೊಂಡಪೆನ್' ಕಾವ್ಯಭಾಗದ ಆಶಯ ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗಿನ ಸಾಲಿನ ಸ್ವಾರಸ್ಯವನ್ನು ಬರೆಯಿರಿ.

ಕೋಣನೆರಡುಂ ಹೋರೆ ಗಿಡುವಿಂಗೆ ಮಿಬ್ರು

## ಕಿರುಲೇಖನ ಬರೆಯಿರಿ

ಹರಿಶ್ಚಂದ್ರನ ದಾನಶೀಲತೆಯನ್ನು ಕಾವ್ಯಭಾಗದಲ್ಲಿ ಓದಿರುವಿರಿ. ದಾನವು ನಮ್ಮ ಸಂಸ್ಕೃತಿಯ ಅಂಗವಾಗಿದೆ. ಈ ಹಿನ್ನೆಯಲ್ಲಿ 'ದಾನದ ಮಹತ್ವ'ದ ಕುರಿತು ಕಿರುಲೇಖನ ಬರೆಯಿರಿ.

## ತದ್ಭವ ರೂಪ ಬರೆಯಿರಿ

ಕಾವ್ಯ ಭಾಗದಲ್ಲಿ ಬಂದಿರುವ ಈ ಕೆಳಗಿನ ಸಂಸ್ಕೃತ ಪದಗಳ ತದ್ಭವ ರೂಪಗಳನ್ನು ಬರೆಯಿರಿ

- ಪ್ರಸಾದ
- ಮೃಗ
- ರಾಜ
- ಕಾರ್ಯ

## ಛಂದಸ್ಸು ತಿಳಿಯಿರಿ

ಕೆಳಗೆ ಕೊಡಲಾದ ಪದ್ಯದ ಸಾಲುಗಳಲ್ಲಿರುವ ಅಕ್ಷರಗಳನ್ನು ಲಘು ಗುರುಗಳಾಗಿ ಗುರುತಿಸಿರುವುದನ್ನು ಗಮನಿಸಿರಿ. ಪ್ರತಿಯೊಂದು ಸಾಲಿನಲ್ಲೂ ಐದೈದು ಮಾತ್ರೆಗಳ ಗಣಗಳಿವೆ. ಒಂದು ಮತ್ತು ಎರಡು, ನಾಲ್ಕು ಮತ್ತು ಐದನೆಯ ಸಾಲುಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳೂ ಮೂರು ಮತ್ತು ಆರನೇ ಸಾಲಿನಲ್ಲಿ ಐದು ಮಾತ್ರೆಯ ಆರು ಗಣಗಳು ಜೊತೆಗೆ ಒಂದು ಗುರುವು ಬರುತ್ತವೆ. ಮೂರನೆಯ ಸಾಲಿನ ಮತ್ತು ಆರನೇ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಅದನ್ನು ಗುರುವಾಗಿ ಗುರುತಿಸಬೇಕು. ಈ ರೀತಿಯ ಲಕ್ಷಣವಿರುವ ಪೂರ್ಣ ಪದ್ಯವನ್ನು ವಾರ್ಧಕ ಷಟ್ಪದಿ ಎನ್ನುತ್ತಾರೆ.

U U U U U | - - U | - UUU | - UUU

ಧರೆಯೊಳು ಹ | ರಿಶ್ಚಂದ್ರ | ನಂ ಹುಸಿಕ | ನೆಂದೆನಿಪ

UU - U | - U - | UU - U | - U - |

ಪರಿಯಾವು | ದೆಂದು ಚಿಂ | ತಿಸಲೊಂದು | ಪಾಯಮಂ |

UUU - | - U UU | - U UU | -U - | - U UU | UU U UU | -

ಕುರಿಸೆ ಕಂ | ಡುಬ್ಬಿ ಭುಜ | ವೊಯ್ದು ನಿಜ | ವೈರ ದಂ | ತಸ್ಥ ವರಿ | ಯದ ಮುನಿಗ | ಳ |

UUU - | - - U | - U - | UUUUU |

ಕರೆದು ನೀ | ವಿಂತೀಗ | ಹೋಗಿ ಭೂ | ವರನನುಪ |

UUU - | UU UU U | - U - | UU - U |

ಚರಿಸಿ ಬೋ | ಧಿಸಿ ಬಹು ಸು | ವರ್ಣಯಾ | ಗವನಾವ |

UU U - | - U UU | UU - U | - U UU | UUU - | - - U | -

ಪರಿಯೊಳಂ | ಮಾಳ್ಪನುವ | ನುರೆ ಮಾಳ್ಪು | ದೆಂದು ಕಳು | ಹಿದನು ವಿ | ಶ್ವಾಮಿತ್ರ | ನು ||

- ಕೆಳಗೆ ಕೊಟ್ಟಿರುವ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿರಿ.

ಹರಿದು ವಿಶ್ವಾಮಿತ್ರ ಮುನಿಗೆಱಗಿ ಚರಣಸರ
ಸಿರುಹಮಂ ತೊಳೆದು ನೆನೆದರ್ಥಮಂ ಬೆಸಸೆನಲು
ಪಿರಿಯ ಕರಿಯಂ ಮೆಟ್ಟಿ ಕವಡೆಯಂ ಮಿಡಿದೊಡೆನಿತುದ್ದಮಂ ಪೋಪುದದಱl
ಸರಿಯೆನಿಸಿ ಸುರಿದ ಹೊಸ ಹೊನ್ನ ರಾಸಿಯನೀವು
ದರಸಯೆಂದೆನೆ ಹಸಾದಂ ಕೊಟ್ಟೆನದನೀಗ
ಲಿರದೊಯ್ವುದೆನೆ ನಿನ್ನ ಮೇಲಿರಲಿ ಬೇಹಾಗ ತರಿಸಿಕೊಂಡಪೆನೆಂದನು II೭II

# ಯಕ್ಷಗಾನ

**- ವಿ.ಜಿ. ನಾಯಕ**

ಹಾಡು ನೃತ್ಯಗಳು ಮನುಷ್ಯನಿಗೆ ಸ್ವಭಾವತಃ ಪ್ರಿಯವಾದವುಗಳು. ಅವು ಮನುಷ್ಯನ ಜೀವನದಲ್ಲಿ ಸಮರಸವಾಗಿ ಅವನೊಡನೆ ಬೆಳೆದುಕೊಂಡು ಬಂದಿವೆ. ಅಳುತ್ತಿರುವ ಮಗುವು ತಾಯಿಯ ಮಂಜುಳ ಜೋಗುಳದಲ್ಲಿ ತಲ್ಲೀನವಾಗಿ ಅಳು ನಿಲ್ಲಿಸಿ ನಿದ್ದೆ ಹೋಗುತ್ತದೆ. ತಾಯಿ ಮಗುವಿನೆದುರಲ್ಲಿ ಚಪ್ಪಾಳೆ ಬಾರಿಸಿ ನಕ್ಕಳೆಂದರೆ ತಾನು ಕೈಕಾಲು ಆಡಿಸುತ್ತಾ ನಗಲು ತೊಡಗುತ್ತದೆ. ಮಗುವಿನೆದುರಲ್ಲಿ ಯಾರಾದರೂ ಕುಣಿಯತೊಡಗಿದರೆ ತಾನೂ ಕುಣಿಯತೊಡಗುತ್ತದೆ. ಇಷ್ಟಲ್ಲದೆ ಜೀವನದಲ್ಲಿಯ ಎಂಥ ಸಂಕಟವನ್ನೇ ಅದರೂ ಮರೆಯಿಸಿ ಮನುಷ್ಯನನ್ನು ಮಹದಾನಂದ ಸಾಗರದಲ್ಲಿ ಮುಳುಗಿಸುವಂಥ ಶಕ್ತಿ ಹಾಡು ನೃತ್ಯಗಳಿಗಿರುತ್ತದೆ. ಇಂತಹ ಹಾಡು, ನೃತ್ಯ, ಸಂಭಾಷಣೆ ಎಲ್ಲವೂ ಸೇರಿಕೊಂಡಿರುವ ಯಕ್ಷಗಾನವು ಅದ್ಭುತ ಕಲೆಯೇ ಸರಿ.

ಯಕ್ಷಗಾನದ ಹುಟ್ಟು ಎಂದಾಯಿತು? ಮೊದಲಿನ ಯಕ್ಷಗಾನ ಪ್ರಸಂಗವನ್ನು ಬರೆದ ಕವಿ ಯಾರು?ಎಂಬ ಬಗ್ಗೆ ಇತಿಹಾಸ ಬರೆದಿಟ್ಟವರಿಲ್ಲ. ಹೀಗಾಗಿ ಎಷ್ಟು ಪೂರ್ವದಲ್ಲಿ ಯಕ್ಷಗಾನವು ಹುಟ್ಟಿತೆಂದು ಹೇಳಲು ಸಾಧ್ಯವಿಲ್ಲ. ಕ್ರಿ.ಶ. ೧೪೫೭ ರಲ್ಲಿದ್ದ ರತ್ನಾಕರವರ್ಣಿ ಯಕ್ಷಗಾನವನ್ನೂ, ಭರತನಾಟ್ಯವನ್ನೂ ತನ್ನ ಗ್ರಂಥದಲ್ಲಿ ಬಣ್ಣಿಸಿದ್ದಾನೆ. ಆದ್ದರಿಂದ ಆ ಸಮಯದಲ್ಲಿ ಯಕ್ಷಗಾನವು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿತ್ತು ಎಂದು ಹೇಳಲಾಗಿದೆ. ಸಾವಿರಾರು ವರ್ಷಗಳಿಂದಲೂ ಯಕ್ಷಗಾನವು ದಕ್ಷಿಣ ಭಾರತದಲ್ಲೂ, ವಿಶೇಷವಾಗಿ ನಮ್ಮ ಕರ್ನಾಟಕದಲ್ಲೂ ಬೆಳೆದುಕೊಂಡು ಬಂದಿದೆ ಎಂದು ಹೇಳಲಾಗಿದೆ.



ಇನ್ನು ಯಕ್ಷಗಾನ ಸಾಹಿತ್ಯಗಳ ಬಗ್ಗೆ ನೋಡೋಣ. ಈ ಸಾಹಿತ್ಯಗಳು ಯಕ್ಷಗಾನ ಪ್ರದರ್ಶನದ ಸಲುವಾಗಿಯೇ ರಚಿತವಾದವುಗಳೇ ಅಥವಾ ಅವು ಮೊದಲೇ ಹಾಡುಗಬ್ಬಗಳಾಗಿ ರಚಿಸಲ್ಪಟ್ಟಿದ್ದವೋ ಎಂಬುದನ್ನು ನಿರ್ಧಾರವಾಗಿ ಹೇಳಲು ಬರುವಂತಿಲ್ಲ. ಬಹುಶಃ ಅವು ಮೊದಲೇ ಹಾಡುಗಬ್ಬಗಳಾಗಿಯೇ ರಚಿತಗೊಂಡು ಆಮೇಲೆ ಹಾಡಿನೊಡನೆ ನೃತ್ಯವೂ ಸೇರಿ ಪ್ರದರ್ಶನಕ್ಕೆ ಬದಲಾಯಿತೆಂದು ತೋರುತ್ತದೆ. ಈ ಸಾಹಿತ್ಯಗಳು ನೂರಾರು ವರ್ಷಗಳ ಪೂರ್ವದಿಂದ ರಚಿತವಾಗುತ್ತಾ ಬಂದಿವೆಯೆನ್ನಲು ಅಡ್ಡಿಯಿಲ್ಲ.

ಯಕ್ಷಗಾನಗಳು ಸಾಮಾನ್ಯವಾಗಿ ಪೌರಾಣಿಕ ಕಥಾಭಾಗವನ್ನೇ ಒಳಗೊಂಡಿರುತ್ತವೆ. ರಾಮಾಯಣ, ಮಹಾಭಾರತಗಳ ಮುಖ್ಯ ಕಥೆಯ ವಿವಿಧ ಸನ್ನಿವೇಶಗಳು, ಅವುಗಳಲ್ಲಿಯ ಉಪಾಖ್ಯಾನಗಳ ಕಥೆಗಳು, ಭಾಗವತ ಮತ್ತು ಪುರಾಣದೊಳಗಿನ ಕಥೆಗಳು ಯಕ್ಷಗಾನ ಪ್ರಬಂಧಗಳ ಕಥಾವಸ್ತು. ಯಕ್ಷಗಾನ ಕಥಾವಸ್ತು ಶ್ರೀ ವಿಷ್ಣುವಿನ ಒಂದಿಲ್ಲೊಂದು ಅವತಾರಕ್ಕೆ ಸಂಬಂಧಿಸಿದ್ದೆ ಇರುವುದರಿಂದ ಯಕ್ಷಗಾನ ನಾಟಕಗಳಿಗೆ 'ದಶಾವತಾರ ನಾಟಕ' ಎಂದು ಕರೆಯುವುದುಂಟು. ಈ ಯಕ್ಷಗಾನಗಳು ಮೂಲಕಥೆಯನ್ನು ಯಾವ ಬದಲಾವಣೆಯೂ ಇಲ್ಲದೆ ಯಥಾವತ್ತಾಗಿ ಚಿತ್ರಿಸುತ್ತವೆ. ಇದ್ದ ಕಥೆಯನ್ನು ಇದ್ದಂತೆಯೇ ಯಕ್ಷಗಾನ ರೂಪದಲ್ಲಿ ಹೇಳುವುದೇ ಯಕ್ಷಗಾನ ಕವಿಯ ಅಥವಾ ಪ್ರಸಂಗಕಾರನ ಮುಖ್ಯ ಉದ್ದೇಶ. ಆದ್ದರಿಂದ ಮೂಲ ಕತೆಯಲ್ಲಿ ಬದಲಾವಣೆಯನ್ನು ಮಾಡುವುದಾಗಲಿ, ಹೊಸ ವಸ್ತುವನ್ನು ಕಲ್ಪಿಸುವುದಾಗಲಿ ಆತನಿಗೆ ಅವಶ್ಯವಿರಲಿಲ್ಲ.

ಪಾತ್ರ ಪರಿಪೋಷಣೆಯಲ್ಲಿ ಕೂಡ ಯಕ್ಷಗಾನ ಕವಿಯು ಸ್ವಪ್ರತಿಭೆಯನ್ನು ತೋರಿದ್ದು ಕಂಡು ಬರುವುದಿಲ್ಲ. ಕಾರಣವೇನೆಂದರೆ ಯಕ್ಷಗಾನ ಪ್ರಸಂಗಗಳನ್ನು ರಚಿಸಿದವರಲ್ಲಿ ಹೆಚ್ಚಿನವರು ವಿದ್ಯಾವಂತರಲ್ಲದ ಹಳ್ಳಿಯ ರಸಿಕ ಜನರು. ಅವರಲ್ಲಿ ಸಾಹಿತ್ಯ ದೃಷ್ಟಿ ಇರಲಿಲ್ಲ. ಹಾಗೆಂದ ಮಾತ್ರಕ್ಕೆ ಯಕ್ಷಗಾನ ಪ್ರಬಂಧಗಳಲ್ಲಿ ಸಾಹಿತ್ಯಾಂಶ ಏನೂ ಇಲ್ಲವೆಂದರ್ಥವಲ್ಲ.ಆದರೆ ಅದಕ್ಕೆ ಗೌಣಸ್ಥಾನ, ಪ್ರಾಮುಖ್ಯತೆ ಇಲ್ಲ. ಯಕ್ಷಗಾನ ಪ್ರಬಂಧಗಳಲ್ಲಿ ವ್ಯಂಜಕತ್ವವು ಮಾತ್ರ ಬಹು ಚೆನ್ನಾಗಿ ಕಂಡುಬರುತ್ತದೆ. ಯಕ್ಷಗಾನ ಪ್ರಸಂಗಕಾರರು ಸಾಹಿತ್ಯದ ಆಳವಾದ ಅಭ್ಯಾಸವಿಲ್ಲದವರಾದರೂ ಕಲೆಯ ಮುಖ್ಯ ಧರ್ಮವಾದ ರಸಪ್ರತಿಪಾದನೆಯ ಕೆಲಸವನ್ನು ಬಹು ಚೆನ್ನಾಗಿ ಮಾಡಿದ್ದಾರೆ. ಮಾತ್ರೆಗಳು, ನಾದ ಪ್ರವಾಹಗಳು, ಅಕ್ಷರದ ಕರ್ಕಶ, ಮೃದು ಉಚ್ಚಾರಗಳು ಇಂಥವನ್ನೆ ತರಂಗ ತರಂಗವಾಗಿ ಪೋಣಿಸಿ, ತಾಳಕ್ಕೆ ಹೊಂದಿಸಿ, ಉಕ್ಕು ಬಂದಾಗ ಉಕ್ಕಿ ಕೂಗಿ, ಕೋಪವಾದಾಗ ಕೋಪಕ್ಕೂ, ಹಾಸ್ಯ ಮೂಡಿದಾಗ ಚೇಷ್ಟೆಗೂ, ಶೃಂಗಾರಕ್ಕೂ, ಶೋಕಕ್ಕೂ, ಜೀವನದ ಪ್ರತಿಯೊಂದು ರಸಭಾವಕ್ಕೂ ಪ್ರಕಟಣೆ ಕೊಟ್ಟಿರುತ್ತಾರೆ. ಯಕ್ಷಗಾನದ ಪ್ರತಿಯೊಂದು ಹಾಡು ಭಾವಪೂರ್ಣವಾಗಿಯೂ ಲಲಿತವಾಗಿಯೂ ಇದ್ದು, ಸಾಮಾನ್ಯ ಜನತೆಗೂ ಸಹಜವಾಗಿ ಅರ್ಥವಾಗುವಂತಿರುತ್ತದೆ. ಉದಾಹರಣೆಯಾಗಿ ಈ ಕೆಳಗಿನ ಪದ್ಯಗಳನ್ನು ನೋಡಬಹುದು. 'ಸೀತಾಪಹರಣ' ಪ್ರಸಂಗದಲ್ಲಿ ಸೀತೆಯನ್ನು ಅಗಲಿದ ರಾಮನು ತಮ್ಮನೊಡನೆ ತನ್ನ ಸ್ಥಿತಿಯನ್ನು ಹೇಳುತ್ತಿದ್ದಾನೆ.

ರಾಗ ಕಾಂಬೋಧಿ, ಜಂಪೆ ತಾಳ

ಪೊಡವಿ ಗಿಡ ಮರ ಕಲ್ಲು । ನೋಡಿದರೆ ಅರಿಶಿಣದ । ಪುಡಿಗೆದರಿದಂತಿಹುದು ತಮ್ಮ ।ಒಡಲೋಳುರಿ ।ಹರಿಹರಿದು । ಚೈತನ್ಯ ಬರಬರುತ । ನಡುಗುತಿದೆ ಕೈಕಾಲು ತಮ್ಮ ॥೧॥ ನುಡಿವೆನೆಂದರೆ ಗಂಟ । ಲೆಡೆಯ ಕೈಯಿಂದವು ।ಪಿಡಿದೊತ್ತಿದಂತಿಹುದು ತಮ್ಮ ॥ ಮಡದಿ ಜಾನಕಿತುನ । ವಿಲ್ಲದಿ ಮೈಯೊಂದು ಬಿಡುದಾರಾ ವಾಯ್ತಲ್ಲೋ ತಮ್ಮ ॥೨॥

ರಾಮನ ನಿಸ್ಸಹಾಯಕ ಸ್ಥಿತಿಯನ್ನು ಇಂತಹ ಚೆಲುವಾದ ಮಾತುಗಳಿಂದ ಕವಿ ವರ್ಣಿಸಿ ನಮ್ಮ ಕಣ್ಣಲ್ಲಿ ನೀರು ಬರುವಂತೆ ಮಾಡಿದ್ದಾನೆ.

ಯಕ್ಷಗಾನ ಪ್ರಸಂಗ ಕೃತಿಗಳು ತಾಳಬದ್ಧವಾದ ಹಾಡುಗಳಿಂದ ರಚಿತವಾಗಿರುತ್ತವೆ. ಮಧ್ಯದಲ್ಲಿ ಅಲ್ಲಲ್ಲಿ ಕಥೆಯ ಜೋಡಣೆಗಾಗಿ ಭಾಮಿನಿ, ವಾರ್ಧಕ, ಕಂದಪದ್ಯ ಮತ್ತು ವಚನಗಳನ್ನು ಸೇರಿಸುವುದುಂಟು. ತಾಳಬದ್ಧವಾದ ಹಾಡುಗಳೆಲ್ಲವೂ ನೃತ್ಯದೊಡನೆ ಹೊಂದಿಕೊಂಡಿರುತ್ತವೆ. ಯಕ್ಷಗಾನ ಕವಿಗಳು ಈ ತಾಳಗಳಿಗನುಸಾರವಾಗಿ ನಗು, ಕೋಪ, ದುಃಖಗಳಿಂದ ತಾವು ಆವಿಷ್ಟರಾಗಿ ಹಾಡುಗಳನ್ನು ಹಾಡುತ್ತಾರೆ.

ಯಕ್ಷಗಾನ ನಾಟಕ ಪದ್ಧತಿ ಎಷ್ಟು ಹಿಂದಿನದೋ, ಯಕ್ಷಗಾನ ಸಾಹಿತ್ಯಕೃತಿಗಳು ಅಷ್ಟೇ ಹಿಂದಿನವು, ಆದರೆ ಪುರಾತನ ಕವಿಗಳೆಲ್ಲರೂ ನಮಗೆ ಅಜ್ಞಾತರು. ಪ್ರಸಿದ್ಧಿಗೆ ಬಂದಿರುವ ಪ್ರಸಂಗ ಕರ್ತರಲ್ಲಿ ಮೊದಲಿನವನು ಪಾರ್ತಿಸುಬ್ಬನೆಂದು ಹೇಳಬಹುದಾಗಿದೆ. ಈತನು ಕುಂಬಳೆಯ ಹತ್ತಿರದ ಶೇಡಿಕಾವು ಎಂಬಲ್ಲಿ ೧೮ನೇ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದನೆಂದು ಹೇಳಲಾಗಿದೆ. ಆಗ ಖ್ಯಾತಿ ಪಡೆದಿದ್ದ ಶ್ರೀ ಗೋಪಾಲಕೃಷ್ಣ ದೇವಾಲಯದ ಮೇಳದಲ್ಲಿ ಪಾರ್ತಿಸುಬ್ಬನು ಭಾಗವತನಾಗಿ ಕೆಲಸ ಮಾಡಿದ್ದನೆಂದು ತೋರುತ್ತದೆ. ಯಾಕೆಂದರೆ ಅವನ ಪ್ರಸಂಗಗಳಲ್ಲಿ ಗೋಪಾಲಕೃಷ್ಣ ದೇವಾಲಯದ ಉಲ್ಲೇಖವಿದೆ. ಪಾರ್ತಿಸುಬ್ಬನು ಯಕ್ಷಗಾನವನ್ನು ಹೆಚ್ಚು ಕಲಾತ್ಮಕವನ್ನಾಗಿ ಮಾಡಿ ಸುಂದರವಾದ ಪ್ರಸಂಗಗಳನ್ನು ರಚಿಸಿ, ತಾನೇ ಭಾಗವತನಾಗಿ ನಿಂತು ಹಾಡಿ, ಯಕ್ಷಗಾನ ಪ್ರಪಂಚದಲ್ಲಿ ಪ್ರಗತಿಯನ್ನು ಸಾಧಿಸಿದ ಆಚಾರ್ಯ ಪುರುಷನೆಂದು ಹೇಳಬಹುದು. ಮುಂದೆ ೧೯ನೇ ಶತಮಾನದ ಕೊನೆಯಲ್ಲಿದ್ದ ಮಹಾಕವಿ ಮುದ್ದಣನು ಯಕ್ಷಗಾನಕ್ಕೆ ಮಹತ್ತರವಾದ ಕೊಡುಗೆ ನೀಡಿದ್ದಾನೆ. ಅವನ 'ಕುಮಾರವಿಜಯ'ವು ಅತ್ಯಂತ ಸುಂದರವಾದ ಯಕ್ಷಗಾನ ಕಾವ್ಯ.

ಇಂದು ಯಕ್ಷಗಾನ ನಾಟಕದಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟು ಎಂಬ ಪ್ರಭೇದಗಳು ಕಂಡು ಬರುತ್ತವೆ. ಬೇರೆ ಬೇರೆ ಕಡೆಯ ಯಕ್ಷಗಾನ ನಾಟಕಗಳ, ರಂಗಸ್ಥಳ ರೀತಿ ನೀತಿಗಳಲ್ಲೂ, ಹಾಡುಗಳ ರಾಗ-ತಾಳಗಳಲ್ಲೂ, ವೇಷಭೂಷಣಗಳಲ್ಲೂ, ಕುಣಿತದಲ್ಲೂ ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ತೀರ ದಕ್ಷಿಣದಲ್ಲಿ

ಪಾತ್ರಧಾರನು ತನ್ನ ಪಾತ್ರದ ಗುಣ-ಭಾವಗಳಿಗೆ ಅನುಗುಣವಾಗಿ ಹಾಡಿನ ಭಾಗವನ್ನು ಮೂಕಾಭಿನಯದಿಂದ ವ್ಯಕ್ತ ಪಡಿಸುತ್ತಾನೆ. ಸ್ವಲ್ಪ ಉತ್ತರದಲ್ಲಿ ಪಾತ್ರಧಾರಿಯು ಭಾಗವತನೊಡನೆ ತಾನೂ ತನ್ನ ಪಾಲಿನ ಹಾಡನ್ನು ಅಲ್ಪಸ್ವಲ್ಪ ಹಾಡಿಕೊಂಡು ಭಾವವನ್ನು ವ್ಯಕ್ತಪಡಿಸುತ್ತಾನೆ.

ಯಕ್ಷಗಾನ ನಾಟಕದ ಪ್ರದರ್ಶನವು ಸುಗ್ಗಿಯ ಕಾಲ ಮುಗಿದ ನಂತರ ಬಯಲು ಪ್ರದೇಶಗಳಲ್ಲಿ ರಾತ್ರಿ ಬೆಳಗಾಗುವವರೆಗೆ ನಡೆಯುವುದು ರೂಢಿ. ಈಗ ಬೇರೆ ಬೇರೆ ಯಕ್ಷಗಾನ ತಂಡಗಳು ಥಿಯೇಟರಿನಲ್ಲಿಯೂ ಯಕ್ಷಗಾನ ಪ್ರದರ್ಶನವನ್ನು ಪ್ರಾರಂಭ ಮಾಡಿರುತ್ತವೆ. ರಂಗಸ್ಥಳದ ಹಿಂಬದಿಗೆ ಬಣ್ಣದ ಚೌಕಿ ಇರುತ್ತದೆ. ಚೌಕಿಯ ಮುಂಬದಿಯ ಪರದೆಗೆ ಹತ್ತಿರ ಭಾಗವತರು ಕೈಯಲ್ಲಿ ತಾಳಹಿಡಿದು ಕುಳಿತಿರುತ್ತಾರೆ. ಅವರ ಪಕ್ಕದಲ್ಲಿ ಮೃದಂಗದವನು, ಮಧ್ಯೆ ಶ್ರುತಿಯವನು ಕುಳಿತಿರುತ್ತಾರೆ. ಬಡಗುತಿಟ್ಟಿನಲ್ಲಿ ಚೆಂಡೆಯವನು ಬಲ ಬದಿಯಲ್ಲಿರುತ್ತಾನೆ. ತೆಂಕುತಿಟ್ಟಿನಲ್ಲಿ ಎಡಬದಿಯಲ್ಲಿರುತ್ತಾನೆ. ತಾಳ/ಜಾಗಟೆ, ಮೃದಂಗ, ಶ್ರುತಿ ಮತ್ತು ಚೆಂಡೆ ಇವಿಷ್ಟು ಯಕ್ಷಗಾನದ ಹಿಮ್ಮೇಳ. ಮೊದಲಿದ್ದ ದೀವಟಿಗೆಗಳ ಸ್ಥಾನದಲ್ಲಿ ಬಳಿಕ ದೀಪಗಳು ಈಗ ವಿದ್ಯುತ್ ದೀಪಗಳು ಬಂದಿವೆ.

ಯಕ್ಷಗಾನ ನಾಟಕಗಳಲ್ಲಿ ಭಾಗವತನ ಪಾತ್ರ ಬಹುಮುಖ್ಯವಾದುದು. ಯಕ್ಷಗಾನ ಕವಿಯು ಪದ್ಯಗಳನ್ನು ಸಂಪೂರ್ಣವಾಗಿ ನಾಟಕ ರೂಪದಲ್ಲಿ ಹೆಣೆಯುವುದಿಲ್ಲ. ಜನಮೇಜಯ ರಾಜನಿಗೆ ವೈಶಂಪಾಯನನಾಗಲಿ, ಶೌನಕಾದಿಗಳಿಗೆ ಸೂತ ಪುರಾಣಿಕರಾಗಲಿ, ಪಾರ್ವತಿಗೆ ಪರಮೇಶ್ವರನಾಗಲಿ ಗತಿಸಿಹೋದ ಕಥೆಯನ್ನು ಹೇಳುವಂತೆ ಸಾಧ್ಯವಿದ್ದಷ್ಟು ನಾಟಕೀಯವಾಗಿ ಬರೆಯುತ್ತಾನೆ. ಪಾತ್ರಗಳ ವ್ಯಕ್ತಿ ಚಿತ್ರವೂ, ದಿಗ್ದರ್ಶನ ಕಾರ್ಯವೂ ಈ ಪದ್ಯಗಳಲ್ಲೇ ಸಮಾವೇಶವಾಗುತ್ತದೆ. ಇಂಥ ಪದ್ಯಗಳನ್ನು ಹಾಡಿ ಕಥೆಯಲ್ಲಿ ಜೋಡಣೆಯನ್ನು ಮಾಡಬೇಕಾದುದು ಭಾಗವತನ ಕೆಲಸ. ಅನೇಕ ವೇಳೆ ಆತನು ಪಾತ್ರಧಾರಿಗಳೊಡನೆ ಸಂಭಾಷಣೆಯನ್ನು ನಡೆಸಬೇಕಾಗುತ್ತದೆ. ದೇವರ ಸ್ತುತಿಯಿಂದ ಆರಂಭಿಸಿ ಇಡೀ ಕಥೆಯ ವಿವಿಧ ತಾಳ, ರಾಗಗಳಲ್ಲಿರುವ ಹಾಡುಗಳೆಲ್ಲವನ್ನು ಹಾಡಿ ಕಥೆಯನ್ನು ಸಾಗಿಸಿಕೊಟ್ಟು ಮಂಗಲವನ್ನು ಹಾಡುವುದು ಭಾಗವತನ ಕೆಲಸ. ಆಯಾಗೀತೆಗಳಲ್ಲಿ ಅಡಕವಾಗಿರುವ ರಸಭಾವವನ್ನು ಭಾಗವತನು ಅನುಭವಿಸಿ ಹಾಡಿ, ನಟನನ್ನು ಅವನ ಪಾತ್ರಕ್ಕೆ ಯೋಗ್ಯವಾದ ದಾರಿಯಲ್ಲಿ ಮುನ್ನಡೆಸಬೇಕಾಗುತ್ತದೆ. ಅವನಿಗೆ ಯಕ್ಷನಾಟಕದ ಬಗ್ಗೆ ಸಂಪೂರ್ಣ ಜ್ಞಾನವಿರಬೇಕು. ಒಂದೇ ಮಾತಿನಲ್ಲಿ ಹೇಳಬೇಕಾದರೆ ಭಾಗವತನು ಯಕ್ಷ ನಾಟಕದ ಸೂತ್ರಧಾರನಾಗಿದ್ದಾನೆ.

ಯಕ್ಷಗಾನದ ಪಾತ್ರಧಾರಿಗಳು ತಮ್ಮ ಪಾತ್ರಗಳಿಗೆ ಉಚಿತವಾದ ವೇಷ-ಭೂಷಣಗಳನ್ನು ಮಾಡಿಕೊಂಡಿರುತ್ತಾರೆ. ಸಾಮಾನ್ಯವಾಗಿ ಉದಾತ್ತ ರಾಜಪಾತ್ರಗಳು ಕಿರೀಟವನ್ನು, ಪ್ರಾಯದ ತರುಣರು, ತುಂಡು ರಾಜರು ಮತ್ತು ರಾಜಕುಮಾರರು ಸಿರಿಮುಡಿ ಅಥವಾ ಪಗಡೆ ರುಮಾಲನ್ನು ತಲೆಯ ಮೇಲೆ

ಧರಿಸುವುದು ರೂಢಿ. ಯಕ್ಷಗಾನದ ಪಾತ್ರಗಳು ಕುಣಿಯುತ್ತಾ ಅಥವಾ ತೆರೆಯಲ್ಲಿ ರಂಗ ಪ್ರವೇಶ ಮಾಡುತ್ತವೆ. ಪ್ರವೇಶವಾದೊಡನೆಯೆ ಪಾತ್ರಧಾರಿಯು ಭಾಗವತರ ನೆರವಿನಿಂದಲೋ ಅಥವಾ ನೆರವಿಲ್ಲದೆಯೋ ಸಭಿಕರಿಗೆ ತನ್ನ ಪರಿಚಯ ಮಾಡಿ ಕೊಡುವನು. ಹಾಡು ಮುಗಿದೊಡನೆ ನೃತ್ಯವೂ ಮುಗಿಯುತ್ತದೆ. ನೃತ್ಯ - ಹಾಡುಗಳು ಮುಗಿದೊಡನೆಯೆ ನಟನು ತನಗೆ ಸಂಬಂಧಿಸಿದ ಪದ್ಯದ ಅರ್ಥ ಹೇಳುವನು. ಈ ಮಾತುಗಳು ಮೊದಲೇ ತಯಾರಿಸಿ ಬಾಯಿಪಾಠ ಮಾಡಿ ಹೇಳುವಂಥವಲ್ಲ. ಆದರೂ ಸಮಯವರಿತ ಸಂಭಾಷಣೆಗಳವು. ಒಮ್ಮೊಮ್ಮೆ ಬಹು ವಿದ್ವತ್ಪೂರ್ಣವಾಗಿರುತ್ತವೆ.

ಯಕ್ಷಗಾನದ ಜೀವಾಳವೆಂದರೆ ಕುಣಿತ. ಪ್ರವೇಶ, ನಿಷ್ಕ್ರಮಣ ಮತ್ತು ಕಾಳಗಗಳಲ್ಲಿಯ ಕುಣಿತಗಳನ್ನು ಬಿಟ್ಟರೆ, ಯಕ್ಷನೃತ್ಯವು ಹಾಡಿನೊಡನೆ ಪ್ರಾರಂಭವಾಗಿ ಹಾಡಿನೊಡನೆಯೆ ಮುಕ್ತಾಯವಾಗುತ್ತದೆ. ಇಲ್ಲಿಯ ಕುಣಿತ ತಾಳಪ್ರಧಾನವಾಗಿರುತ್ತದೆ. ಆದರೆ ವಿವಿಧ ವಿಶಿಷ್ಟ ತಾಳಬದ್ಧವಾದ ಭಂಗಿಗಳಿರಬೇಕೆಂಬುದಿಲ್ಲ. ಹಾಡಿನ ಭಾವರಸಗಳಿಗೆ ಹೊಂದಿಕೊಂಡು ಅದರ ತಾಳ ತರಂಗದೊಡನೆ ಕುಣಿತವು ಸಾಗಬೇಕಾಗುವುದರಿಂದ ಈ ನೃತ್ಯದಲ್ಲಿ ವಿಶಿಷ್ಟ ಭಂಗಿಗಳಿಗೆ ಅವಕಾಶ ದೊರೆಯುವುದಿಲ್ಲ. ಆದರೆ ಈ ನರ್ತನದ ರೀತಿ-ವೈವಿಧ್ಯ ಯಾವ ರಸವನ್ನಾದರೂ ಪೋಷಿಸಿ ತೋರಿಸಬಲ್ಲುದು. ವೀರರಸವಂತೂ ಹೊಳೆಯಾಗಿ ಹರಿಯುತ್ತಿದೆಯಲ್ಲಿ.

ಯಕ್ಷನೃತ್ಯದಲ್ಲಿ ವೀರದ ಗಡಸುತನವಲ್ಲದೆ ಶೃಂಗಾರದ ನಯ ನಾಜೂಕತೆಯು ಇರುತ್ತದೆ. ಈ ನಯ ನಾಜೂಕತೆಯು ಹೆಣ್ಣಿನ ಕುಣಿತದಲ್ಲಿ ಎದ್ದು ಕಾಣುತ್ತದೆ. ಸ್ತ್ರೀಪಾತ್ರದ ಕುಣಿತದಲ್ಲಿ ಮೈಯ, ಕೈಯ ಮತ್ತು ಕತ್ತಿನ ಬಳುಕಾಟಕ್ಕೆ ಚೆನ್ನಾಗಿ ಅವಕಾಶವಿರುವುದರಿಂದ ಶೃಂಗಾರ ರಸ ಪೋಷಕವಾದ ಲಾವಣ್ಯ, ಲಾಸ್ಯಗಳು ಉತ್ತಮವಾಗಿ ಪ್ರಕಟಗೊಳ್ಳುತ್ತವೆ. ಅಂತೂ ವೀರರಸಕ್ಕೆ ಗಂಡಸು ಅಧಿಕಾರಿಯಾದಂತೆ, ಶೃಂಗಾರ ರಸಕ್ಕೆ ಹೆಣ್ಣು ಅಧಿಕಾರಿಯೆನ್ನಬಹುದು.

ಹಾಸ್ಯ ರಸಕ್ಕೆ ಕೂಡ ಕುಣಿತವಿದೆ. ರಂಗಸ್ಥಳದಲ್ಲಿ ತೇಲಿಹೋಗುತ್ತಿರುವ ವ್ಯಂಗ್ಯ ಚಿತ್ರರೂಪಿ ವಿದೂಷಕನ ಕುಣಿತವನ್ನು ಕಂಡು ನಗದವರಾರು? ಇದರಂತೆ ಎಲ್ಲಾ ರಸಗಳನ್ನು ಕುಣಿತದಲ್ಲಿ ಸಾಧಿಸಬಹುದು. ಆದರೂ ಯಕ್ಷಗಾನ ನರ್ತಕರು ಮುಖ್ಯವಾಗಿ ಬೆಳೆಸಿಕೊಂಡು ಬಂದಿರುವ ರಸಭಾವಗಳು ವೀರ ಮತ್ತು ಶೃಂಗಾರಗಳೆರಡೇ ಎನ್ನಬಹುದಾಗಿದೆ. ಶೋಕ, ಕರುಣೆ ಮೊದಲಾದ ರಸಗಳನ್ನು ಕುಣಿತದಲ್ಲಿ ತೋರಿಸುವ ಸಂಪ್ರದಾಯವಿಲ್ಲ. ಆದರೆ ಯಕ್ಷಗೀತೆ ಅವೆಲ್ಲವನ್ನು ಚೆನ್ನಾಗಿ ಸಾಧಿಸಿದೆ.

ನೃತ್ಯ ಮತ್ತು ವೇಷಭೂಷಣಗಳಿಂದ ಹೊರತಾಗಿರುವಂತಹ 'ತಾಳಮದ್ದಳೆ' ಎಂಬ ಯಕ್ಷಗಾನದ ಇನ್ನೊಂದು ವಿಧವನ್ನೂ ನಾವು ಕಾಣಬಹುದು. ಭಾಗವತರು, ಇತರ ಹಿಮ್ಮೇಳದವರು ಮತ್ತು ಪಾತ್ರಧಾರಿಗಳು



ಒಂದೇ ಕಡೆ ಕುಳಿತು, ಆಯ್ದುಕೊಂಡಿರುವ ಪ್ರಸಂಗವನ್ನು ಪ್ರದರ್ಶಿಸುವ ಕ್ರಮವೇ 'ತಾಳಮದ್ದಳೆ'. ಇಲ್ಲಿ ಮಾತುಗಾರಿಕೆಯೇ ಮುಖ್ಯ; ವೇಷ, ಕುಣಿತಗಳಿಗೆ ಅವಕಾಶವಿಲ್ಲ. ಭಾಗವತರು ಹಾಡಿದ ಹಾಡಿಗೆ ಪಾತ್ರಧಾರಿಗಳು ಆಶುರೂಪದಲ್ಲಿ ಅರ್ಥ ಹೇಳುವುದೇ ತಾಳಮದ್ದಳೆಯ ವಿಶೇಷತೆ. ಈ ತಾಳಮದ್ದಳೆಯನ್ನು 'ಯಕ್ಷಗಾನ ಕೂಟ' ಎಂದೂ ಕರೆಯುತ್ತಾರೆ.

ಅಂತೂ ಈ ಯಕ್ಷಗಾನ ಕಲೆಯು ಕರ್ನಾಟಕದ ಒಂದು ಅಪೂರ್ವ ಕಲಾ ಸಂಪತ್ತು. ಹೆಸರೇ ಸೂಚಿಸುವಂತೆ ಇದೊಂದು ಸಂಗೀತ ವಿಧಾನ. ವಿಶಿಷ್ಟವಾದ ಈ ದೇಸಿಗಾಯನ ಪದ್ಧತಿಗೆ ನೃತ್ಯವೂ ಸೇರಿಕೊಂಡು ಮತ್ತಷ್ಟು ವಿಶಿಷ್ಟತೆ ಬಂದಿರುತ್ತದೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಈ ಕಲೆಯು ಬಹುವಾಗಿ ಬೆಳೆದು ಬಾಳಿಕೊಂಡು ಬಂದಿದೆ. ಕಾಲಕ್ಕೆ ತಕ್ಕಂತೆ ಈ ಕಲೆಯಲ್ಲಿ ಸಾಕಷ್ಟು ಸುಧಾರಣೆಗಳು ಆಗಿವೆ. ಯಕ್ಷಗಾನವು ಕನ್ನಡ ನಾಡಿಗೆ ಮಾಡುತ್ತಿರುವ ಸೇವೆ ಅಮೋಘವಾದುದು. ಪುರಾಣ ಕಥೆಗಳನ್ನು ಇದ್ದಕ್ಕಿದ್ದಂತೆ ಸಾಮಾನ್ಯ ಜನತೆಗೂ ತಿಳಿಯುವಂತೆ ಮಾಡಿ ನಮ್ಮ ಸಂಸ್ಕೃತಿ ಪ್ರಸಾರ ಕಾರ್ಯವನ್ನು ಯಕ್ಷಗಾನದಷ್ಟು ಯಾವುದೂ ಮಾಡಿಲ್ಲವೆನ್ನಬಹುದು. ಪುರಾಣದ ಆದರ್ಶ ವ್ಯಕ್ತಿಗಳನ್ನು ಜನರ ಚಿತ್ತದ ಮೇಲೆ ಅಚ್ಚೊತ್ತಿ ಅವರನ್ನು ನೀತಿವಂತರನ್ನಾಗಿಸಿದ ಶ್ರೇಯಸ್ಸು ಮೊದಲನೆಯದಾಗಿ ಯಕ್ಷಗಾನಕ್ಕೆ ಸಲ್ಲುತ್ತದೆ. ದಿನವಿಡೀ ದುಡಿದು ಹಣ್ಣಾದ ಹಳ್ಳಿಯ ಬಡ ರೈತನು ರಾತ್ರಿಯ ಒಂದು ಗಳಿಗೆ ಯಕ್ಷಗಾನದ ಹಾಡುಗಳನ್ನು ಹಾಡಿ ಮನಸ್ಸಿನ ಬೇಸರವನ್ನು ಕಳೆದುಕೊಳ್ಳುವನು. ಹೀಗೆ ಯಕ್ಷಗಾನ ನಮ್ಮ ಜನರ ಸಾಂಸ್ಕೃತಿಕ, ನೈತಿಕ ಮತ್ತು

ಶೈಕ್ಷಣಿಕ ಉನ್ನತಿಯನ್ನು ಸಾಧಿಸುತ್ತ ಬಂದಿದೆ.

ಆದ್ದರಿಂದ ಇಂಥದೊಂದು ಶ್ರೇಷ್ಠವಾದ ಜನಪದ ಕಲೆಯನ್ನು ಪ್ರೋತ್ಸಾಹಿಸಬೇಕಾದುದು ನಮ್ಮ ಕರ್ತವ್ಯ. ನಮ್ಮ ನಾಡಿನ ಶ್ರೇಷ್ಠವಾದ ಕಲೆ ಇದು ಎಂಬುದನ್ನರಿತು ಸುಶಿಕ್ಷಿತರೂ ಸುಸಂಸ್ಕೃತರೂ ಈ ಕಲೆಯ ಪ್ರಸಾರಕ್ಕೆ ಪ್ರೋತ್ಸಾಹವೀಯಬೇಕು. ಆಗ ಕಲೆಗೂ ಬೆಲೆ ಬಂದೀತು; ನಾಡಿಗೂ ಶ್ರೇಯಸ್ಸು ದೊರಕೀತು.

## ಲೇಖಕರ ಪರಿಚಯ



ಸಮಾಜವಾದಿ ಚಿಂತಕ ವಿ.ಜೆ.ನಾಯಕರು ಕರ್ನಾಟಕದ ಅಂಕೋಲಾ ತಾಲೂಕಿನ ವಂದಿಗೆ ಗ್ರಾಮದವರು. ಶಿಕ್ಷಣಪ್ರಸಾರ, ಕನ್ನಡಪರ ಆಂದೋಲನ ಸೇರಿದಂತೆ ವಿವಿಧ ಹೋರಾಟಗಳಲ್ಲಿ ಪಾಲ್ಗೊಂಡಿದ್ದ ವಿ. ಜೆ. ನಾಯಕರು ಭೂಸುಧಾರಣಾ ಚಳುವಳಿ ಸಂದರ್ಭದಲ್ಲಿ ದಿನಕರ ದೇಸಾಯಿ ಅವರೊಂದಿಗೆ ಕೈಜೋಡಿಸಿದ್ದರು. ಯಕ್ಷಗಾನ, ಚೆಂಡೆಮದ್ದಳೆ, ಬಯಲಾಟ, ಹವ್ಯಾಸಿ ನಾಟಕದಲ್ಲಿ ಅಭಿನಯಿಸುವ ಮೂಲಕ ಕಲಾಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ೧೯೬೧ರಲ್ಲಿ ಶೇಟಗೇರಿಯಲ್ಲಿ ಸ್ಥಾಪನೆಯಾದ ಸತ್ಯಾಗ್ರಹ ಸ್ಮಾರಕ ವಿದ್ಯಾಲಯದ ಸಂಸ್ಥಾಪಕ ಕಾರ್ಯದರ್ಶಿಯಾಗಿ ಮತ್ತು ಮುಖ್ಯೋಪಾಧ್ಯಾಯರಾಗಿ ಕಾರ್ಯ ನಿರ್ವಹಿಸಿದ್ದರು. ರಾಷ್ಟ್ರಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪುಸ್ತಕ ಬಹುಮಾನ, ಕರ್ನಾಟಕ ಅಕಾಡೆಮಿ ಗೌರವ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಶ್ರೀಯುತರು ಭಾಜನರಾಗಿದ್ದರು. ವಿ.ಜೆ. ನಾಯಕರು ೪.೬.೨೦೧೭ ರಂದು ತಮ್ಮ ಇಳನೇ ವಯಸ್ಸಿನಲ್ಲಿ ನಿಧನರಾದರು. 'ಯಕ್ಷಗಾನ' ಪಾಠವನ್ನು ಅವರ 'ಯಕ್ಷಗಾನ ಕೆಲವು ಲೇಖನಗಳು' ಎಂಬ ಕೃತಿಯಿಂದ ಆರಿಸಲಾಗಿದೆ.

## ಉತ್ತರಿಸಿರಿ

**ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಯಕ್ಷಗಾನದ ಹುಟ್ಟಿನ ಬಗೆಗಿನ ಅಭಿಪ್ರಾಯಗಳೇನು?
2. ಸಾಂಪ್ರದಾಯಿಕ ಯಕ್ಷಗಾನ ಪ್ರಸಂಗಗಳ ಕಥಾವಸ್ತು ಯಾವುದು?
3. ಯಕ್ಷಗಾನವನ್ನು 'ದಶಾವತಾರ ನಾಟಕ' ಎಂದು ಕರೆಯಲು ಕಾರಣವೇನು?
4. ಯಕ್ಷಗಾನಕ್ಕೆ ಪಾರ್ತಿಸುಬ್ಬನ ಕೊಡುಗೆ ಏನು?
5. ಯಕ್ಷಗಾನದ ಎರಡು ಪ್ರಮುಖ ಪ್ರಭೇದಗಳು ಯಾವುವು?
6. ತಾಳಮದ್ದಳೆ ಎಂದರೇನು?

## ಪತ್ರ ಬರೆಯಿರಿ

ನೀವು ನೋಡಿದ ಯಾವುದಾದರೊಂದು ಯಕ್ಷಗಾನದ ಕುರಿತು ವಿವರಿಸಿ ನಿಮ್ಮ ಗೆಳೆಯ/ಗೆಳತಿಗೊಂದು ಪತ್ರ ಬರೆಯಿರಿ.

## ಲಿಖಿತ ಭಾಷಣ ತಯಾರಿಸಿರಿ

ವಿದ್ಯಾರಂಗ ಕಲಾ ಸಾಹಿತ್ಯ ವೇದಿಕೆಯ ಆಶ್ರಯದಲ್ಲಿ, ಶಾಲೆಯಲ್ಲಿ ನಡೆಯುವ ವಿಚಾರಗೋಷ್ಠಿಯಲ್ಲಿ ಮಂಡಿಸುವುದಕ್ಕಾಗಿ 'ಯಕ್ಷಗಾನ ಕಲೆಯ ಮೇಲೆ ಸಮೂಹ ಮಾಧ್ಯಮಗಳು ಬೀರಿದ ಪ್ರಭಾವ' ಎಂಬ ವಿಷಯದ ಕುರಿತು ಒಂದು ಲಿಖಿತ ಭಾಷಣ ತಯಾರಿಸಿರಿ.

## ಸಂದರ್ಶನ ಪ್ರಶ್ನಾವಳಿ ತಯಾರಿಸಿರಿ

ಯಕ್ಷಗಾನ ಕಲೆಯ ಕುರಿತು ಮಾಹಿತಿ ಸಂಗ್ರಹಿಸುವುದಕ್ಕಾಗಿ ಯಕ್ಷಗಾನ ಕಲಾವಿದರ ಸಂದರ್ಶನಕ್ಕೆ ಅಗತ್ಯವಾದ ಪ್ರಶ್ನಾವಳಿ ತಯಾರಿಸಿರಿ.

## ಸಂದರ್ಶನ ಲೇಖನ ಬರೆಯಿರಿ

ಯಕ್ಷಗಾನ ಕಲಾವಿದರನ್ನು ಸಂದರ್ಶಿಸಿ ಸಂಗ್ರಹಿಸಿದ ಮಾಹಿತಿಯ ಆಧಾರದಲ್ಲಿ ಒಂದು ಸಂದರ್ಶನ ಲೇಖನ ತಯಾರಿಸಿರಿ.

## ಪಟ್ಟಿಮಾಡಿರಿ

ನಿಮ್ಮ ನಾಡಿನ ಹತ್ತು ಮಂದಿ ತಾಳಮದ್ದಳೆ ಅರ್ಥಧಾರಿಗಳ ಹೆಸರುಗಳನ್ನು ಪಟ್ಟಿಮಾಡಿರಿ.

## ವ್ಯಕ್ತಿ ಪರಿಚಯ ಬರೆಯಿರಿ

ಕಾಸರಗೋಡಿನ ಪ್ರಸಿದ್ಧ ಯಕ್ಷಗಾನ ಕಲಾವಿದರಾದ ಶೇಣಿ ಗೋಪಾಲಕೃಷ್ಣ ಭಟ್ಟರ ಕುರಿತು ಕೆಲವು ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ. ಈ ಮಾಹಿತಿಗಳ ಆಧಾರದಲ್ಲಿ ಅವರ ವ್ಯಕ್ತಿ ಪರಿಚಯ ಬರೆಯಿರಿ.

| | | |
|---|---|---|
| ಜನನ | : | ಏಪ್ರಿಲ್ ೭. ೧೯೧೮ |
| ಜನ್ಮಸ್ಥಳ | : | ಕಾಸರಗೋಡು ತಾಲ್ಲೂಕಿನ ಕುಂಬಳೆಯ ಎಡನಾಡು |
| ವೃತ್ತಿ | : | ಯಕ್ಷಗಾನ ಕಲಾವಿದ |
| ಪ್ರಶಸ್ತಿ ಗೌರವಗಳು | : | ‘ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ’, `ಕೇರಳ ಸಂಗೀತ ಅಕಾಡೆಮಿ ಪ್ರಶಸ್ತಿ’, `ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ’, ಹಾಗೂ ಮಂಗಳೂರು ವಿಶ್ವವಿದ್ಯಾಲಯದ ಗೌರವ `ಡಾಕ್ಟರೇಟ್ ಪದವಿ’ ಅಖಿಲ ಕರ್ನಾಟಕ ಯಕ್ಷಗಾನ ಸಮ್ಮೇಳನದ ಅಧ್ಯಕ್ಷತೆ. |
| ಕೃತಿಗಳು | : | ಮಧ್ಯಮ ವ್ಯಾಯೋಗ, ಪರಿಣಯ, ಶರವು ಕ್ಷೇತ್ರ ಮಹಾತ್ಮೆ, ಮೇಘನಾದ ವಿಜಯ, ಗೃಹಿಣಿ, ರಾಮಾಂಜನೇಯ, ಮಾತೃಭಕ್ತಿ ಇತ್ಯಾದಿಗಳು. |
| ಸೇವೆ | : | ಕೂಡ್ಲು, ಧರ್ಮಸ್ಥಳ, ಸುರತ್ಕಲ್ ಮೊದಲಾದ ಮೇಳಗಳಲ್ಲಿ. |
| ಪ್ರಧಾನ ವೇಷಗಳು | : | ಬಪ್ಪ ಬ್ಯಾರಿ, ಭೀಷ್ಮ, ವಾಲಿ, ಕಂಸ, ರಾವಣ, ಮಾಗಧ ಮುಂತಾದವು... |
| ನಿಧನ | : | ಜೂನ್ ೮, ೨೦೦೬ |

## ಆಲ್ಬಂ ತಯಾರಿಸಿರಿ

ಯಕ್ಷಗಾನದ ವಿವಿಧ ವೇಷಗಳ ಚಿತ್ರಗಳನ್ನು ಸಂಗ್ರಹಿಸಿ ಸೂಕ್ತ ಟಿಪ್ಪಣಿಯೊಂದಿಗೆ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಒಂದು ಸುಂದರವಾದ ಆಲ್ಬಂ ತಯಾರಿಸಿರಿ.

# ಅರ್ಥಕೋಶ

| | | |
|---|---|---|
| ಅಂಕುರ | - | ಮೊಳಕೆ, ಚಿಗುರು |
| ಅಂಕುರಿಸು | - | ಹುಟ್ಟು |
| ಅಂತಕ | - | ಯಮ, ಶಿವ |
| ಅಂತಸ್ಥ | - | ಒಳಗಿನ, ನಡುವಿನ |
| ಅಂಬರ | - | ಆಕಾಶ, ಬಾಂದಳ |
| ಅಂಬುಧಿ | - | ಸಮುದ್ರ, ಕಡಲು |
| ಅಖಿಳ | - | ಎಲ್ಲ |
| ಅಗಮ್ಯ | - | ತಿಳಿಯದ, ಸುಲಭವಾಗಿ ತಲುಪದ |
| ಅಡಿ | - | ಪಾದ |
| ಅಣಗಿರ್ದು | - | ಸುಪ್ತವಾಗಿದ್ದು |
| ಅತಿದೋಷ | - | ದೊಡ್ಡ ದೋಷ |
| ಅದಮ್ಯ | - | ನಿಯಂತ್ರಿಸಲು ಅಸಾಧ್ಯವಾದುದು |
| ಅನನ್ಯ | - | ವಿಶಿಷ್ಟ, ಸರಿಸಾಟಿಯಿಲ್ಲದ |
| ಅನವರತ | - | ಸದಾ, ನಿತ್ಯ |
| ಅನಿತು | - | ಅಷ್ಟು |
| ಅನಿರ್ವಚನೀಯ | - | ಹೇಳುವುದಕ್ಕೆ ಸಾಧ್ಯವಿಲ್ಲದ |
| ಅನೂಹ್ಯ | - | ಅಸಾಧಾರಣ, ಊಹಿಸಲು ಸಾಧ್ಯವಿಲ್ಲದ |
| ಅಪ್ರತಿಮ | - | ಎಣೆಯಿಲ್ಲದ |
| ಅಮಳ | - | ಶ್ರೇಷ್ಠವಾದ , ಪರಿಶುದ್ಧ |
| ಅರಕೆ | - | ಕೊರತೆ |
| ಅರವಟ್ಟಿಗೆ | - | ಬಾಯಾರಿದವರಿಗೆ ಉಚಿತವಾಗಿ ನೀರು ಕೊಡುವ ಜಾಗ |
| ಅರಿಕೆ | - | ಮನವಿ ,ಬೇಡಿಕೆ |
| ಅರಿಯದೆ | - | ತಿಳಿಯದೆ |
| ಅರಿವು | - | ತಿಳಿವಳಿಕೆ, ಜ್ಞಾನ |

| | | |
|---|---|---|
| ಅರುಹು | - | ತಿಳಿಸು |
| ಅರ್ತಿ | - | ಪ್ರೀತಿ |
| ಅರ್ಥ | - | ಸಂಪತ್ತು, ಪ್ರಯೋಜನ |
| ಅರ್ಥಿ ಜನ | - | ಬೇಡುವವರು |
| ಅಲುಗಿಸಿ | - | ಅಲುಗಾಡಿಸಿ,ನಡುಗಿಸಿ |
| ಅವನೀಶ | - | ಭೂಮಿಯ ಒಡೆಯ, ರಾಜ |
| ಅಸೀಮ | - | ಅಪಾರ, ಅಮಿತ, ಎಲ್ಲೆಯಿಲ್ಲದ, ಮೇರೆಯಿಲ್ಲದ |
| ಆಗಮ | - | ಪರಂಪರೆಯಿಂದ ಬಂದ ಶಾಸ್ತ್ರ |
| ಆಚಾರ್ಯ ಪುರುಷ | - | ಶ್ರೇಷ್ಠ ವ್ಯಕ್ತಿ |
| ಆಟಿ | - | ತುಳುವಿನ ಒಂದು ತಿಂಗಳು, ವರ್ಷದ ನಾಲ್ಕನೇ ತಿಂಗಳು |
| ಆಮೋದ | - | ಸಂತೋಷ, ಸುಗಂಧ, ಸುವಾಸನೆ |
| ಆರಭಾರ (ಆರವಾರ) | - | ಎಲ್ಲವನ್ನೂ ಒಪ್ಪಿಸುವ ಜವಾಬ್ದಾರಿ, ಹೊಣೆ |
| ಆವಿಷ್ಟ | - | ಪ್ರವೇಶಿಸಿದ, ಆವೇಶ ಹೊಂದಿದ |
| ಆವುದು | - | ಯಾವುದು |
| ಆಸನ್ನಭವ್ಯೆ | - | ಜೈನ ತತ್ವೋಪದೇಶದಿಂದ ಮನಃಪರಿಪಾಕವನ್ನು ಹೊಂದಿದವಳು |
| ಇಂತು | - | ಹೀಗೆ |
| ಇಕ್ಕಿ | - | ನೀಡಿ |
| ಇಟಿಗೆ | - | ಇಟ್ಟಿಗೆ |
| ಇನಿತು | - | ಇಷ್ಟು |
| ಇರ್ದನು | - | ಇದ್ದನು |
| ಇಳೆ | - | ಭೂಮಿ |
| ಈಯಬೇಕು | - | ನೀಡಬೇಕು |
| ಈಯು | - | ಕೊಡು |
| ಈರ್ಷೆ | - | ಮತ್ಸರ, ಅಸೂಯೆ |
| ಉಡ | - | ಉಡು, ಹಲ್ಲಿಯ ಜಾತಿಗೆ ಸೇರಿದ ಪ್ರಾಣಿ |
| ಉಣ್ಣು | - | ತಿನ್ನು |

| | | |
|---|---|---|
| ಉತ್ಕರ್ಷ | - | ಹೆಚ್ಚಳ ,ಶ್ರೇಷ್ಠತೆ, ಸಂತೋಷ ಏಳಿಗೆ |
| ಉತ್ತುಂಗ | - | ಎತ್ತರದ, ಶ್ರೇಷ್ಠವಾದ, ಉನ್ನತ |
| ಉದಾತ್ತ | - | ಶ್ರೇಷ್ಠ |
| ಉದ್ಗಾರ | - | ಭಾವಾವೇಶದಿಂದ ಕೂಡಿದ ಮಾತು |
| ಉದ್ಭಾಸಿ | - | ಹೊಳೆಯುವ |
| ಉನ್ನತಿ | - | ಏಳಿಗೆ, ವೃದ್ಧಿ |
| ಉನ್ಮಾದ | - | ಉಲ್ಲಾಸ, ಹರ್ಷ, ಹುಚ್ಚು |
| ಉಪಚರಿಸಿ | - | ಗೌರವಿಸಿ |
| ಉಪಾಖ್ಯಾನ | - | ಉಪಕಥೆ |
| ಉಪೇಕ್ಷೆ | - | ಅನಾದರ |
| ಉರೆ | - | ಅತಿಶಯವಾಗಿ |
| ಉಲ್ಲಂಘಿಸು | - | ಮೀರು, ದಾಟಿ ಹೋಗು |
| ಉಸಿರ್ವ | - | ಉಸಿರಾಡುವ |
| ಎಣೆ | - | ಸಾಟಿ , ಸರಿಸಮಾನ |
| ಎನೆ | - | ಎನ್ನಲು |
| ಎರಗಿ | - | ನಮಸ್ಕರಿಸಿ |
| ಎಲ್ಲೇ ಕಟ್ಟು | - | ಮರ್ಯಾದೆ, ಮಿತಿ , ಮೇರೆ , ಗಡಿ, ಸೀಮೆ |
| ಎವೆಮುಚ್ಚು | - | ಕಣ್ಣರೆಪ್ಪೆ ಮುಚ್ಚು |
| ಎಸೆವ | - | ಶೋಭಿಸುವ |
| ಎಱ | - | ಬೇಡು |
| ಏಕಾಂತ | - | ಗುಟ್ಟು,ರಹಸ್ಯ |
| ಏಟು | - | ಪೆಟ್ಟು |
| ಏರ್ಪಾಡು | - | ವ್ಯವಸ್ಥೆ, ತಯಾರಿ |
| ಒಂದು ಗಳಿಗೆ | - | 24 ನಿಮಿಷಗಳ ಕಾಲ |
| ಒಗ್ಗು | - | ಹೊಂದಿಕೆಯಾಗು |
| ಒಡಕು | - | ಭಿನ್ನಭಾವ ,ಬಿರುಕು |

| | | |
|---|---|---|
| ಒಡಮೆ | - | ಒಡವೆ, ಆಸ್ತಿ, ಸಂಪತ್ತು |
| ಒಡಲು | - | ಶರೀರ |
| ಒಡಲು | - | ಶರೀರ, ದೇಹ |
| ಒಪ್ಪು | - | ಸಮ್ಮತಿಪಡು, ಅಹುದೆನ್ನು |
| ಒಯ್ಯುವುದು | - | ತೆಗೆದುಕೊಂಡು ಹೋಗುವುದು |
| ಒಸೆ | - | ಪ್ರಸನ್ನನಾಗು ,ಮೆಚ್ಚು |
| ಒಳಕೊಠಡಿ | - | ಒಳಕೋಣೆ |
| ಓ | - | ಪ್ರೀತಿಸು |
| ಓಜ | - | ಗುರು, ಶಿಲ್ಪಿ |
| ಓವು | - | ಪ್ರೀತಿಸು, ಕಾಪಾಡು, ಉಪಚರಿಸು |
| ಕಂಗಾಲಾಗು | - | ದಿಕ್ಕು ತೋಚದಾಗು |
| ಕಂಟಕ | - | ತೊಂದರೆ, ಕೇಡು |
| ಕಂಡಿ | - | ಕಿಟಿಕಿ |
| ಕಡೆಗಂದಿ | - | ಕಡೆಗಂಜಿ,ಕೊನೆಯ ಕರು |
| ಕಣಸು | - | ನೋಟ, ಮೈಮರೆಸುವಂತಹ ಸುಂದರ ದೃಶ್ಯ,ಆದರ್ಶ |
| ಕಪಟಪಟು | - | ಮೋಸ ಮಾಡುವವ |
| ಕಬಳಿಸು | - | ನುಂಗು |
| ಕರಿ | - | ಆನೆ |
| ಕರುಬು | - | ಅಸೂಯೆ, ಹೊಟ್ಟೆಕಿಚ್ಚು ಪಡು |
| ಕರ್ಕಶ | - | ಇಂಪಿಲ್ಲದ |
| ಕರ್ಬೊಗೆ | - | ಕಪ್ಪು ಹೊಗೆ |
| ಕಲಕು | - | ಕದಡು |
| ಕಲ್ಲ ಕಲಂಬಿ | - | ಕಲ್ಲಿನ ಕಪಾಟು |
| ಕವಡೆ | - | ಒಂದು ಬಗೆಯ ಕಡಲ ಚಿಪ್ಪು, ಒಂದು ಕಾಲದ ನಾಣ್ಯ |
| ಕಳಾಹೀನ | - | ಪ್ರಕಾಶವನ್ನು ಕಳೆದುಕೊಳ್ಳು, ಕಳೆಗುಂದು |
| ಕಾಟ | - | ತೊಂದರೆ |

| | | |
|---|---|---|
| ಕಾತರ | - | ತವಕ |
| ಕಾರಾಗೃಹ | - | ಸೆರೆಮನೆ |
| ಕಾರ್ಯ | - | ಕೆಲಸ |
| ಕಾಳಗ | - | ಯುದ್ಧ |
| ಕಿಚ್ಚು | - | ಬೆಂಕಿ |
| ಕಿಡಿಗೇಡಿ | - | ತಿಳಿಗೇಡಿ,ತಂಟೆಕೋರ |
| ಕೀಟಲೆ ಮಾಡು | - | ತೊಂದರೆ ಮಾಡು |
| ಕುಟಿಲ | - | ಮೋಸ |
| ಕೆಚ್ಚು | - | ಧೈರ್ಯ, ಗರ್ವ |
| ಕೆಡವು | - | ಬೀಳಿಸು |
| ಕೆಡಹು | - | ಬೀಳಿಸು |
| ಕೆನ್ನಾಲಿ | - | ಕೆಂಪಾದ ನಾಲಿಗೆ (ಜ್ವಾಲೆ) |
| ಕೋಡು | - | ಶಿಖರ |
| ಕೋಮು | - | ಜಾತಿ |
| ಕ್ಷುದ್ರ | - | ಕೀಳು, ಹೀನ, ಅಲ್ಪ, ದುಷ್ಟ |
| ಕ್ಷುಬ್ಧ | - | ತಳಮಳಿಸು, ಅಲ್ಲೋಲಕಲ್ಲೋಲ |
| ಕ್ಷೋಣಿ | - | ಭೂಮಿ |
| ಖ್ಯಾತಿ | - | ಕೀರ್ತಿ |
| ಖೈದು | - | ಸೆರೆ ಹಿಡಿದು |
| ಗಗ್ಗರ | - | ಭೂತರಾಧಾನೆಯಲ್ಲಿ ಉಪಯೋಗಿಸುವ ಕಾಲಿನ ಕಡಗ |
| ಗಡಬಡಿಸಿ | - | ಗಡಿಬಿಡಿ ಮಾಡಿ |
| ಗಡಿಕಲ್ಲು | - | ಮೇರೆಯನ್ನು ಸೂಚಿಸುವ ಕಲ್ಲು |
| ಗತಿ ತೋರು | - | ಬುದ್ಧಿ ಕಲಿಸು |
| ಗತಿಸಿ ಹೋದ | - | ಅಳಿದು ಹೋದ, ಮೃತಪಟ್ಟ |
| ಗರತಿ | - | ಗೃಹಿಣಿ |
| ಗಲಭೆ | - | ಗದ್ದಲ |
| ಗವಿ | - | ಗುಹೆ, ನೆಲೆ |

| | | |
|---|---|---|
| ಗಹಗಹಿಸು | - | ದೊಡ್ಡ ಸ್ವರದನಗು, ಗೊಳ್ಳೆಂದು ನಗು |
| ಗಳಿಕೆ | - | ಸಂಪಾದನೆ |
| ಗಿಡು | - | ಸಸಿ |
| ಗೆಯ್ಯುವುದು | - | ದುಡಿಯುವುದು, ಶ್ರಮಿಸುವುದು ,ಕೆಲಸ ಮಾಡುವುದು |
| ಗೊರಸು | - | ಪಾದದ ಗಟ್ಟಿಯಾದ ಹೊದಿಕೆ |
| ಗೋಚರ | - | ದನಮೇಯುವ ಹುಲ್ಲುಗಾವಲು, ಕಣ್ಣಿಗೆ ಕಾಣತಕ್ಕ |
| ಗೋಳುಹೊಯ್ಯು | - | ಪೀಡಿಸು, ತೊಂದರೆ ಕೊಡು |
| ಗೌಣ | - | ನಗಣ್ಯ,ಕೇವಲ |
| ಚಾಳಿ | - | ಕೆಟ್ಟ ಚಟ, ನಡತೆ |
| ಚಿಂತಾಕ್ರಾಂತ | - | ದು:ಖಪೀಡಿತ |
| ಚಿಗರೆ | - | ಜಿಂಕೆ |
| ಚಿತ್ಕಳಾ | - | ಮನಸ್ಸಿಗೆ ಮುದ ನೀಡುವ |
| ಚಿತ್ತ | - | ಮನಸ್ಸು |
| ಚಿನಿವಾರ | - | ಅಕ್ಕಸಾಲಿಗ |
| ಚಿನ್ಮಯಿ | - | ಮನಸೆಳೆಯುವ, ಆಕರ್ಷಿಸುವ |
| ಚೆನ್ನೆ | - | ಮಂಜಟ್ಟಿ ಕಾಯಿ |
| ಚೆನ್ನೆಮಣೆ | - | ತುಳುನಾಡಿನ ಜನಪ್ರಿಯ ಒಳಾಂಗಣ ಆಟ |
| ಚೇತನ | - | ಜೀವ,ಶಕ್ತಿ,ಬುದ್ಧಿ, ಜ್ಞಾನ |
| ಚೇಷ್ಟೆ | - | ಕೀಟಲೆ ,ತುಂಟಾಟ |
| ಚೌಕಿ | - | ವೇಷ ಹಾಕುವ ಸ್ಥಳ |
| ಛಿದ್ರ | - | ಬಿರುಕು, ಚೂರು |
| ಜನ ವಂದಿತೆ | - | ಜನರಿಂದ ವಂದಿಸಲ್ಪಡುವವಳು |
| ಜಸ | - | ಯಶ, ಯಶಸ್ಸು |
| ಜಾಕೆಟ್ | - | ರವಿಕೆ |
| ಜಾಗರ | - | ಎಚ್ಚರ |
| ಜಿನಶಾಸನ | - | ಜಿನನ ಆಜ್ಞೆ, ಜೈನ ಸಿದ್ಧಾಂತ |
| ಜಿರಾಪತ್ತು ಮಳೆ | - | ಹನಿಕಡಿಯದೆ ಸುರಿಯುವ ಮಳೆ |

| | | |
|---|---|---|
| ಜೀವಾಳ | - | ತಿರುಳು, ಸತ್ವ |
| ಜ್ವಲಂತ | - | ಸ್ಪಷ್ಟ |
| ಝಾಡಿಸು | - | ಕೊಡಹು, ನಿಂದಿಸು, ದಬಾಯಿಸು |
| ಡೊಂಬನ | - | ಡೊಂಬರಾಟದವನ |
| ತಂಗೊಳ | - | ತಂಪಾದ ಕೊಳ |
| ತಂತ್ರ | - | ಉಪಾಯ |
| ತಡವು | - | ತಡವರಿಸು |
| ತತ್ | - | ಅದು |
| ತನ್ಮಯಿ | - | ಮಗ್ನ, ತಲ್ಲೀನ |
| ತಬ್ಬಿಬ್ಬಾಗು | - | ಕಕ್ಕಾ ಬಿಕ್ಕಿ, ದಿಗ್ಭ್ರಮೆ |
| ತವಿಸು | - | ಕುಂದಿಸು,ತಗ್ಗಿಸು,ಕ್ಷೀಣಗೊಳಿಸು |
| ತಳಮಳ | - | ಆತುರ, ಕಳವಳ |
| ತಳೆದು | - | ಹೊತ್ತು |
| ತಿರಿಬೂಡು | - | ಬಡವರ ಮನೆ |
| ತುಸು | - | ಸ್ವಲ್ಪ |
| ತೂರು | - | ಪ್ರವೇಶಿಸು, ಮೇಲಕ್ಕೆ ಎಸೆ |
| ತೃಣ | - | ಹುಲ್ಲು |
| ತೇಗು | - | ಸಾಗುವಾನಿ ಮರ, ಜಾತಿಯ ಮರ |
| ಥಿಯೇಟರ್ | - | ರಂಗಮಂದಿರ |
| ದಂಡಿಗೆ | - | ಪಲ್ಲಕ್ಕಿ |
| ದಕ್ಷತೆ | - | ನೈಪುಣ್ಯ, ಕಾರ್ಯಕ್ಷಮತೆ |
| ದರಿದ್ರ | - | ಬಡವ, ಹಣವಿಲ್ಲದವ |
| ದರ್ಶನ | - | ಧರ್ಮ |
| ದಾಂಧಲೆ | - | ಕೋಲಾಹಲ, ಗದ್ದಲ |
| ದಿಕ್ತಟ | - | ದಿಗಂತ, ದಿಕ್ಕಿನ ಅಂತ |
| ದಿಗ್ದರ್ಶನ | - | ಮಾರ್ಗದರ್ಶನ |
| ದಿಟ್ಟಿಸು | - | ನೆಟ್ಟ ನೋಟದಿಂದ ನೋಡು |

| | | |
|---|---|---|
| ದೀವಟಿಗೆ | - | ಪಂಜು, ದೊಂದಿ |
| ದುಂದುಭಿ | - | ವಾದ್ಯ |
| ದುಡುಕು | - | ವಿಚಾರ ಮಾಡದೇ ಕೆಲಸಕ್ಕೆ ಕೈ ಹಾಕು,ಮುಂಗೋಪಿ |
| ದುರ್ನಾತ | - | ಕೆಟ್ಟವಾಸನೆ |
| ದುರ್ಭೇದ್ಯ | - | ಒಡೆಯಲು ಅಸಾಧ್ಯವಾದ |
| ದೆಸೆ | - | ದಿಕ್ಕು |
| ದೌಷ್ಟವ | - | ದುಷ್ಟತನ |
| ಧರೆ | - | ಭೂಮಿ |
| ಧರ್ಮಗೊಡ್ಡು | - | ಧರ್ಮಕ್ಕೆ ಕಟ್ಟು ಬೀಳುವುದು |
| ಧಿಕ್ಕನೆ | - | ಒಮ್ಮೆಲೆ |
| ಧೀವರ | - | ಬೇಟೆಗಾರ |
| ಧೂಮ್ರ | - | ಹೊಗೆ, ಕಂದು ಬಣ್ಣ |
| ಧೂಮ್ರಾಕ್ಷಸ | - | ಹೊಗೆಯೆಂಬ ರಕ್ಕಸ |
| ನರಜಾತಿ | - | ಮಾನವ ಜನಾಂಗ |
| ನಾಜೂಕು | - | ನಯ |
| ನಿಬ್ಬೆರಗು | - | ಅತ್ಯಾಶ್ಚರ್ಯ |
| ನಿಯತಿ | - | ನಿಯಮ, ಅದೃಷ್ಟ, ವಿಧಿ |
| ನಿರಾಶೆ | - | ಆಸೆಯನ್ನು ಕಳೆದುಕೊಂಡಿರುವಿಕೆ |
| ನಿಷ್ಕ್ರಮಣ | - | ಹೋಗುವಿಕೆ |
| ನೆಟ್ಟನೆ | - | ನೆಟ್ಟಗೆ |
| ನೆನಹು | - | ನೆನಪು |
| ನೆನೆದ | - | ಯೋಚಿಸಿದ |
| ನೆರೆದ | - | ಸುತ್ತುವರಿದ |
| ಪಕ್ಕೆ | - | ಮಗ್ಗುಲು |
| ಪಥ್ಯ | - | ರೋಗಿಗೆ ನೀಡುವ ಯೋಗ್ಯವಾದ ಆಹಾರ |
| ಪದ ಪಂಕೇಜ | - | ಪಾದಕಮಲ |
| ಪದೆ | - | ಪ್ರೀತಿ |

| | | |
|---|---|---|
| ಪರವಶನಾಗು | - | ಮಗ್ನನಾಗು, ತಲ್ಲೀನನಾಗು |
| ಪರಾಭವ | - | ಸೋಲು, ಅಪಜಯ |
| ಪರಿ | - | ರೀತಿ |
| ಪರಿಸೆ | - | ಜಾತ್ರೆ |
| ಪರುಷ ಮಣಿ | - | ಮುಟ್ಟಿದ್ದನ್ನು ಚಿನ್ನವಾಗಿಸುವ ಕಲ್ಲು ಮಣಿ |
| ಪರ್ವತಾವಳಿ | - | ಪರ್ವತಗಳ ಸಮೂಹ |
| ಪಶ್ಚಾತ್ತಾಪ | - | ತನ್ನ ತಪ್ಪಿನ ಕುರಿತು ಪಡುವ ದುಃಖ |
| ಪಾಡು | - | ಸ್ಥಿತಿ, ಅವಸ್ಥೆ |
| ಪಿರಿಯ | - | ಹಿರಿಯ |
| ಪೆರರು | - | ಅನ್ಯರು, ಬೇರೆಯವರು. |
| ಪೊಡವಿ | - | ಭೂಮಿ |
| ಪೋಣಿಸಿ | - | ಹೊಂದಿಸಿ, ಕೋದು |
| ಪ್ರಖ್ಯಾತ | - | ಹೆಸರಾಂತ |
| ಪ್ರಭೇದ | - | ಬಗೆ |
| ಪ್ರವೀಣ | - | ಅಧಿಕ ಜ್ಞಾನ ಉಳ್ಳವ, ಬುದ್ಧಿವಂತ |
| ಫಾಸಲೆ | - | ಅಂತರ |
| ಬನ್ನ | - | ತೊಂದರೆ, ಪೀಡೆ |
| ಬರಕಳ (ಬಾರ್ಕಳ) | - | ಭತ್ತ ಕುಟ್ಟುವ ಜಾಗ |
| ಬವಣೆ | - | ಕಷ್ಟ |
| ಬಿಕನಾಸಿ | - | ಭಿಕ್ಷುಕ, ಜಿಪುಣ |
| ಬಿಜಯಂಗೆಯ್ | - | ದಯಮಾಡು, ಬರು |
| ಬಿಡುಗಣ್ಣು | - | ಬಿಟ್ಟಕಣ್ಣು |
| ಬಿರಿಯು | - | ಸೀಳು |
| ಬಿರಿಯು | - | ಮೊಗ್ಗೆ ಅರಳು, ಅರಳು |
| ಬಿರ್ರನೆ | - | ವೇಗವಾಗಿ |
| ಬಿಳಲು | - | ಬಳ್ಳಿ |
| ಬುಧ ಜನ | - | ಪಂಡಿತರು, ವಿದ್ವಾಂಸರು |

| | | |
|---|---|---|
| ಬುಸುಗುಟ್ಟುತ್ತಾ | - | ಬುಸ್ ಎಂದು ಹಾವಿನಂತೆ ಸ್ವರ ಮಾಡುತ್ತಾ |
| ಬೆರಟು | - | ಒಣಗಿ ಹೋಗು |
| ಬೆಸಸು | - | ಹೇಳು |
| ಬೆಳ್ಳಿಯ ಗಿಂಡಿ | - | ಬೆಳ್ಳಿಯ ಸಣ್ಣ ಬಾಯಿಯ ಬಿಂದಿಗೆ |
| ಬೇಹಾಗ | - | ಬೇಕಾದಾಗ |
| ಬೋಧಿಸತ್ತ್ವ | - | ಬುದ್ಧನ ಹಿಂದಿನ ಜೀವನದ ಕಥೆಗಳಲ್ಲಿ ಆತನನ್ನು ಬೋಧಿಸತ್ತ್ವ ಎಂದು ಉಲ್ಲೇಖಿಸಲಾಗಿದೆ. |
| ಬೋಧಿಸಿ | - | ಕಲಿಸಿ |
| ಭಂಗಿ | - | ವಿಧಾನ, ಕ್ರಮ |
| ಭರಿಸು | - | ತುಂಬಿಸು |
| ಭವ | - | ಸಂಸಾರ, ಹುಟ್ಟು |
| ಭವತಾರಿಣಿ | - | ಸದ್ಗತಿ ನೀಡುವವಳು, ಮೋಕ್ಷಪ್ರದಾಯಿನಿ |
| ಭಾಸವಾಗು | - | ಹೊಳೆಯು |
| ಭೂಪಾಲ | - | ರಾಜ |
| ಭೂಭುಜ | - | ರಾಜ |
| ಭೋರ್ಗರೆ | - | ತುಂಬಿ ಹರಿಯು |
| ಭ್ರಷ್ಟ | - | ಸಮಾಜ ಬಾಹಿರ, ದುಷ್ಟ |
| ಭ್ರಾಂತಿ | - | ಭ್ರಮೆ |
| ಮಂಗಳ | - | ಶುಭ |
| ಮಂದಬುದ್ಧಿ | - | ಜಡ ಬುದ್ಧಿ, ನಿಧಾನವಾದ ಬುದ್ಧಿ |
| ಮಕುಟ | - | ಕಿರೀಟ |
| ಮಚ್ಚು | - | ಕಡಿಗತ್ತಿ |
| ಮತ್ತಿ | - | ಮಚ್ಚೆ, ಒಂದು ಜಾತಿಯ ಮರ |
| ಮನೋಧರ್ಮ | - | ಮನಸ್ಸಿನ ರೀತಿ, ಮನಸ್ಸಿನ ನಡಾವಳಿ |
| ಮನೋನ್ಮಯಿ | - | ಮನಸ್ಸಿಗೆ ಆನಂದವನ್ನು ನೀಡುವವಳು |
| ಮನ್ನಿಸಲಾರೆ | - | ಕ್ಷಮಿಸಲಾರೆ |
| ಮಮ್ಮಲಮರುಗು. | - | ತುಂಬಾ ದು:ಖಪಡು |

| | | |
|---|---|---|
| ಮಸುಕು | - | ಮಬ್ಬಾದ |
| ಮಸುಳು | - | ಮಬ್ಬು |
| ಮಸೆವ | - | ಸುಡುವ, ತೀವ್ರವಾದ |
| ಮಾಗು | - | ಪಕ್ವವಾಗು |
| ಮಾನಿನಿ | - | ಹೆಂಗಸು |
| ಮಾಮರ | - | ಮಾವಿನ ಮರ |
| ಮಾರು | - | ಅಳತೆಯ ಮಾನ, ಒಂದು ಮೊಣಕೈಯ ಅಳತೆ |
| ಮಿಡಿದು | - | ಬೆರಳಿನ ಮೇಲಿಟ್ಟು ಹಾರಿಸಿ |
| ಮಿಟ್ತು | - | ಮೃತ್ಯು |
| ಮುಖ ಗೆಲವಾಗು | - | ಮುಖದಲ್ಲಿಸಂತೋಷದ ಕಳೆ ತುಂಬು |
| ಮುತುವರ್ಜಿ | - | ಕಾಳಜಿ |
| ಮೇಡು | - | ದಿಬ್ಬ, ಎತ್ತರದ ಪ್ರದೇಶ |
| ಮೊಕದ್ದಮೆ | - | ದಾವೆ, ಕೇಸು, ವ್ಯಾಜ್ಯ |
| ಮೋಡಿ | - | ಆಕರ್ಷಣೆ |
| ಮೋರೆ | - | ಮುಖ |
| ಯುಕ್ತಿಯುಕ್ತತೆ | - | ತರ್ಕಬದ್ಧವಾಗಿರುವಿಕೆ |
| ರಂಗ ಸಜ್ಜಿಕೆ | - | ರಂಗದ ಅಲಂಕಾರ, ವೇದಿಕೆ ಸಿದ್ಧಪಡಿಸು |
| ರಂಪ | - | ಗದ್ದಲ, ಗಲಾಟೆ |
| ರವ | - | ಶಬ್ದ |
| ರೋದನ | - | ಆಕ್ರಂದನ, ಅಳುವಿಕೆ |
| ರೋಸಿ ಹೋಗು | - | ಬೇಸತ್ತು ಹೋಗು, ಅಸಹನೆಯನ್ನು ವ್ಯಕ್ತಪಡಿಸು |
| ಲಾವಣ್ಯ | - | ಸೌಂದರ್ಯ, ಚೆಲುವು |
| ಲಾಸ್ಯ | - | ಕುಣಿತದ ಒಂದು ಬಗೆ |
| ವರಾಕೊಂದು | - | ವರಹಕ್ಕೆ ಒಂದು. ವರಹ- ಹಳೆಯ ಕಾಲದ ಚಿನ್ನದ ನಾಣ್ಯ |
| ವರ್ಧಿಸು | - | ಹೆಚ್ಚಳವುಂಟಾಗು |
| ವಾಂಛಿತ | - | ಬಯಕೆ |
| ವಿಕಲ್ಪ | - | ವಿಭಿನ್ನತೆ |

| | | |
|---|---|---|
| ವಿಕೃತ | - | ರೂಪುಗೆಟ್ಟ, ಕುರೂಪಿಯಾದ, ಕೆಟ್ಟ |
| ವಿಗಮ | - | ಅಗಲುವಿಕೆ |
| ವಿದೂಷಕ | - | ಹಾಸ್ಯಗಾರ |
| ವಿದ್ವತ್ಪೂರ್ಣ | - | ಪಾಂಡಿತ್ಯವುಳ್ಳ |
| ವಿಧಿ | - | ಅದೃಷ್ಟ |
| ವಿನೋದ ಧ್ವನಿ | - | ವಿಲಾಸ ಧ್ವನಿ, ಉತ್ಸಾಹದ ಸ್ವರ |
| ವಿಮಳ | - | ಕಲ್ಮಶವಿಲ್ಲದ ,ಸ್ವಚ್ಛ |
| ವಿಲಾಸ | - | ವಿನೋದ, ಆಟ, ಕ್ರೀಡೆ |
| ವಿಲಾಸ ಜೀವನ | - | ಆಡಂಬರದ ಜೀವನ |
| ವಿಶುದ್ಧ | - | ಕುಂದಿಲ್ಲದ, ಶುದ್ಧವಾದ, ಪವಿತ್ರ |
| ವಿಸ್ಮಿತ | - | ಆಶ್ಚರ್ಯಗೊಂಡ |
| ವಿಹಿತ | - | ವಿಶೇಷವಾಗಿ ಹಿತಕರ |
| ವೀಚಿ | - | ತರಂಗ, ತೆರೆ |
| ವೇದ | - | ಹಿಂದು ತತ್ವಶಾಸ್ತ್ರ, ಜ್ಞಾನದ ತಿರುಳು |
| ವೈಯಾರಿ | - | ಬಿನ್ನಾಣ |
| ವೈಷಮ್ಯ | - | ದ್ವೇಷ |
| ವ್ಯಂಜಕತ್ವ | - | ಸ್ಪಷ್ಟ ಮಾಡುವ |
| ಶೀಲ | - | ಅಭ್ಯಾಸ, ಒಳ್ಳೆಯ ನಡತೆ |
| ಶುಚಿಜ್ಞಾಪಕ | - | ಶುಚಿಯನ್ನು ಜ್ಞಾಪಕಕ್ಕೆ ತರುವುದು |
| ಶ್ರೇಯಸ್ಸು | - | ಕೀರ್ತಿ |
| ಷರತ್ತು | - | ನಿಬಂಧನೆ |
| ಸಂಕಲ್ಪ | - | ನಿರ್ಧಾರ |
| ಸಂಕುಲ | - | ಸಮೂಹ |
| ಸಂಜನಿತ | - | ಹುಟ್ಟಿದ |
| ಸಂಭ್ರಮ | - | ಸಡಗರ, ವಿಜೃಂಭಣೆ |
| ಸಣಕಲು | - | ಕೃಷಕಾಯ |
| ಸದೆ | - | ಪೊದೆ |

| | | |
|---|---|---|
| ಸನಿಹ | - | ಸಮೀಪ, ಹತ್ತಿರ |
| ಸಮರಸ | - | ಹೊಂದಾಣಿಕೆ |
| ಸಮಾವೇಶ | - | ಒಟ್ಟು ಸೇರು, ಸಮ್ಮೇಳನ |
| ಸಮುಚ್ಚಯ | - | ಹೊಂದಿಕೆ, ಜೋಡಿಸುವಿಕೆ ,ಸಂಗ್ರಹ |
| ಸಮ್ಮುಖ | - | ಎದುರು, ಮುಂಭಾಗ |
| ಸರ್ವ ಮುನಿವರ್ಗ | - | ಎಲ್ಲಾ ಮುನಿ ಸಮೂಹ |
| ಸಾಂಗವಾಗಿ | - | ಲೋಪವಿಲ್ಲದೆ |
| ಸಿದ್ಧತೆ | - | ತಯಾರಿ |
| ಸಿರಿಬೂಡು | - | ಶ್ರೀಮಂತರ ದೊಡ್ಡ ಮನೆ |
| ಸುಕೃತ | - | ಪುಣ್ಯ, ಶುಭ |
| ಸುಚಿತ್ತ | - | ಒಳ್ಳೆಯ ಮನಸ್ಸು |
| ಸುಸೂತ್ರ | - | ತೊಡಕಿಲ್ಲದೆ,ತೊಂದರೆಯಿಲ್ಲದೆ |
| ಸೂಸಲು | - | ಹರಡಲು |
| ಸೆಡವು | - | ಹಟ |
| ಸೇಸೆ | - | ಆಶೀರ್ವಾದ ಮಾಡುವಾಗ ತಲೆಯ ಮೇಲೆ ಹಾಕುವ ಅಕ್ಷತೆ |
| ಸೈರಣೆ | - | ಸಹನೆ |
| ಸೊಟ್ಟಾಗೆ | - | ವಕ್ರವಾಗಲು, ಕೊಂಕಾಗಲು |
| ಸೊಬಗಿನ | - | ಚೆಲುವಿನ |
| ಸೊಲ್ಲು | - | ಮಾತು |
| ಸೋಗು | - | ನಟನೆ |
| ಸ್ವಗತ | - | ತನ್ನಲ್ಲಿ ತಾನೇ ಮಾತನಾಡಿಕೊಳ್ಳು, ಆತ್ಮಗತ |
| ಸ್ವಾಸ್ಥ್ಯ | - | ಆರೋಗ್ಯ |
| ಸ್ವಾಹಾ ಮಾಡು | - | ನುಂಗು |
| ಹಂದರ | - | ಚಪ್ಪರ |
| ಹಂಬಲಿಸು | - | ಬಯಸು |
| ಹತಾಶೆ | - | ನಿರಾಶೆ ಹೊಂದಿದ, ಆಸೆಯಿಲ್ಲದ |
| ಹರಿದ್ವರ್ಣ | - | ಹಚ್ಚ ಹಸುರು ಬಣ್ಣ |

| | | |
|---|---|---|
| ಹರ್ಷ | - | ಸಂತೋಷ |
| ಹಲ್ಲುಮಸೆ | - | ಕೋಪತಾಳು |
| ಹವಣು | - | ಪ್ರಯತ್ನ |
| ಹಸಾದ | - | ಪ್ರಸಾದ |
| ಹಾಡಿ | - | ಕಾಡು, ಹಳ್ಳಿ |
| ಹಾಯ್ಗುಳಿ | - | ಭೂತವು ಸಂಚರಿಸುವಾಗ ವಿಶ್ರಾಂತಿ ಪಡೆಯಲು ಕುಳಿತುಕೊಂಡ ಜಾಗ |
| ಹಾಲಾಹಲ | - | ಮಹಾವಿಷ, ಕಾಲಕೂಟ ವಿಷ |
| ಹೀನಾಯ | - | ನಿಕೃಷ್ಟ |
| ಹುರುಪು | - | ಉತ್ಸಾಹ |
| ಹುಸಿಕ | - | ಸುಳ್ಳುಗಾರ |
| ಹೂಡು | - | ಆರಂಭಿಸುವ |
| ಹೂಣಿಸಿ | - | ಜೋಡಿಸಿ |
| ಹೊಗರು | - | ಪ್ರಕಾಶಿಸು, ಹೊಳಪು |
| ಹೊತ್ತು | - | ಸಮಯ |
| ಹೊದರ | - | ರಾಶಿ |
| ಹೊನಲು | - | ಪ್ರವಾಹ |
| ಹೊನ್ನಾರು | - | ಮುಂಗಾರಿನಲ್ಲಿ ಮಾಡುವ ಮೊದಲ ಉಳುಮೆ |
| ಹೊಯ್ದಾಡು | - | ತೂಗಾಡು, ಅಲ್ಲಾಡು |
| ಹೊಲ್ಲ | - | ಅಯೋಗ್ಯವಾದದ್ದು,ತಕ್ಕುದಲ್ಲದುದು |
| ಹೊಸಗು | – | ತಿಕ್ಕು |
| ಹೋರು | - | ಹೋರಾಡು |
| ಗಿಡು | - | ಸಸಿ |
| ಮಿಱ್ತು | - | ಮೃತ್ಯು |
| ಕ್ಷೋಣಿ | - | ಭೂಮಿ |
| ಹೂಣಿಸಿ | - | ಜೋಡಿಸಿ |

# ಭಾರತದ ಸಂವಿಧಾನ

ಭಾಗ IV ಕ

## ಮೂಲಭೂತ ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು;

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು;

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು;

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು;

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು;

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು;

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು;

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು;

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು;

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in